INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-8, Issue -03,May-June, 2026
Page No,13-30
Peer -Reviewed, Refereed Journal

ಜನಪದ, ಜಾನಪದ ಮತ್ತು ಗೀತೆಗಳು ಒಂದು ಅವಲೋಕನ

ಡಾ.ಎಂ.ಚಂದ್ರಪ್ಪ.[1]

ಸಾಮಾನ್ಯವಾಗಿ ಎಲ್ಲರೂ ಹೇಳುವ ಹಾಗೆ ಜನಪದ ಎಂದರೆ ಜನರ ಬಾಯಿಂದ ಬಾಯಿಗೆ ಬಂದಿರುವಂತಹ ಎಲ್ಲಾ ವಸ್ತು ವಿಷಯಗಳೆಲ್ಲವನ್ನೂ ನಾವು ಜನಪದ ಎಂದು ಕರೆಯುತ್ತೇವೆ. ಅಂದರೆ ಯಾವುದು ಲಿಖಿತ ರೂಪದಲ್ಲಿರುವುದಿಲ್ಲವೊ ಅದನ್ನು ಜನಪದ ಎಂದು ಕರೆಯಲಾಗಿದೆ.

ಜನರ ಬಾಯಿಂದ ಬಾಯಿಗೆ ಬಂದಿರುವುದು ಎಂದರೆ ಏನು? ಅದರ ಹುಟ್ಟು ಮತ್ತು ಬೆಳವಣಿಗೆ ಹೇಗಾಯಿತು? ಎಂಬ ವಿಷಯವನ್ನು ಮೊದಲು ನಾವು ತಿಳಿದುಕೊಳ್ಳಬೇಕಾಗುತ್ತದೆ. ಮನುಷ್ಯ ಎನ್ನುವ ಜೀವಗಳು ಅಥವಾ ಹುಳಗಳು ಈ ಭೂಮಿ ಮೇಲೆ ಚಿಗುರೊಡೆಯುತ್ತವೆ. ಅದರಲ್ಲಿ ಒಂದು ಹೆಣ್ಣು ಮತ್ತೊಂದು ಗಂಡು ಆ ಎರಡು ಜೀವಗಳು ಮಿಲನವಾಗಿ ನೂರಾರು ಹುಳಗಳಾಗುತ್ತವೆ. ಅವುಗಳು ಮಾನವ ರೂಪವನ್ನು ಪಡೆದುಕೊಳ್ಳುತ್ತವೆ. ಆದರೆ ಯಾರಿಗೂ ಯಾವುದಕ್ಕೂ ವಸ್ತುಗಳ, ವಿಷಯಗಳ, ಸಂಬಂಧಗಳ ಬಗ್ಗೆ ತಿಳಿದಿರುವುದಿಲ್ಲ. ಭಾಷೆಯೂ ಸಹ ಗೊತ್ತಿರುವುದಿಲ್ಲ. ಸನ್ನೆಗಳ ಮೂಲಕ, ಮೂಕಾಭಿನಯದ ಮೂಲಕ ಎಲ್ಲವನ್ನೂ ಅರಿತುಕೊಳ್ಳುತ್ತ ಜೀವನ ಸಾಗಿಸುತ್ತಿರುತ್ತಾರೆ. ಆನಂತರ ಮನುಷ್ಯನ ದೇಹ ಬೆಳವಣಿಗೆ ಆಗುತ್ತಾ ಹೋಗುತ್ತದೆ. ಅವುಗಳಲ್ಲಿ ಹಲವಾರು ಏರು ಪೇರುಗಳಾಗುತ್ತವೆ. ಕೇವಲ ಹಸಿವಾದಾಗ ಮಾತ್ರ ಆಹಾರ ಹುಡುಕಿಕೊಳ್ಳಲು ಪ್ರಯತ್ನ ಮಾಡುತ್ತವೆ. ಅಪ್ಪ, ಅಮ್ಮ, ಅಕ್ಕ, ತಂಗಿ, ಅಣ್ಣ, ತಮ್ಮ ಆಕಾಶ, ಭೂಮಿ, ಮರ, ಗಿಡ, ಗಾಳಿ, ಬೆಳಕು, ನೀರು, ಬೆಂಕಿ, ಇತ್ಯಾದಿ. ಗೊತ್ತಿಲ್ಲದೆ, ಸಂಬಂಧಗಳ ಅರಿವಿಲ್ಲದೆ ಬೆಳೆಯುತ್ತ ಹೋಗುತ್ತವೆ. ಶತಮಾನಗಳ ಕಾಲ ಉರುಳಿದಂತೆ, ಬದಲಾವಣೆಗಳು ಆಗುತ್ತವೆ.

ಅದು ಹೇಗೆ ಎನ್ನುವುದನ್ನು ಉದಾಹರಣೆಯ ಮೂಲಕ ಹೇಳುವುದಾದರೆ, ಒಂದು ಕುಟುಂಬ ಕಾಡಿನಲ್ಲಿ ವಾಸ ಮಾಡುವಾಗ ಇದ್ದಕ್ಕಿದ್ದ ಹಾಗೆ ಭಯಂಕರ ಮಳೆ ಬಂದು ಕೆಲವರೆಲ್ಲ ಕೊಚ್ಚಿಕೊಂಡು ಹೋಗುತ್ತಾರೆ. ಮತ್ತೆ ಕೆಲವರು ನೀರಿನಲ್ಲಿ ಮುಳುಗಿ ಸಾಯುತ್ತಾರೆ. ಶಕ್ತಿ ಇರುವ ಕೆಲವರು ತಪ್ಪಿಸಿಕೊಂಡು

[1]. ಉಪನ್ಯಾಸಕರು, ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು.

ಓಡಿ ಹೋಗಿ, ಒಂದು ದೊಡ್ಡ ಮರದ ಕೆಳಗೆ ನಿಂತುಕೊಳ್ಳುತ್ತಾರೆ. ಅವರಿಗೆ ಆಶ್ಚರ್ಯವಾಗುತ್ತದೆ. ಮರದಡಿಯಲ್ಲಿ ನಿಂತುಕೊಂಡ ಅವರಿಗೆ ಮಳೆಯಿಂದ ಉಳಿದುಕೊಂಡೆವು, ಬದುಕಿಕೊಂಡೆವು, ಜೀವ ಉಳಿಯಿತು, ಬಚಾವ್ ಆದ್ವಿ ಅನ್ನೊ ಅರಿವಾಗುತ್ತದೆ. ಆಗ ಅವರು ಮರವನ್ನು ಮುಟ್ಟಿ ನಮಸ್ಕರಿಸಿ ಕೃತಜ್ಞತೆ ಸಲ್ಲಿಸುತ್ತಾರೆ. ಅಲ್ಲಿಂದಲೇ ಆಚರಣೆ ಎನ್ನುವುದು ಶುರುವಾಗುತ್ತದೆ. ನಮಗೆ ಯಾರಾದರೂ ಸಹಾಯ ಮಾಡಿದಾಗ ಅವರಿಗೆ ಥ್ಯಾಂಕ್ಸ್ ಎಂದು ಹೇಳುತ್ತೇವಲ್ಲ ಹಾಗೆ. ಹಾಗೆಯೇ ಇನ್ನೊಂದು ಪ್ರಸಂಗವನ್ನು ನಾವು ಹೇಳುವುದಾದರೆ, ಮರದ ಕೆಳಗೆ ಜನರು ವಾಸ ಮಾಡುತ್ತಿದ್ದಾಗ ಒಂದು ದಿನ ಇದ್ದಕ್ಕಿದ್ದ ಹಾಗೆ ಕಾಡ್ಗಿಚ್ಚಿನಿಂದ ಇಡೀ ಅರಣ್ಯ ಪ್ರದೇಶವೆಲ್ಲ ಬೆಂಕಿಗೆ ಆಹುತಿಯಾಗುತ್ತದೆ. ಕೆಲವು ಜನರು ಸಾಯುತ್ತಾರೆ ಮತ್ತೆ ಕೆಲವರು ತಪ್ಪಿಸಿಕೊಂಡು ಓಡಿ ಹೋಗಿ ಒಂದು ಗುಹೆಯಲ್ಲಿ ಸೇರಿಕೊಳ್ಳುತ್ತಾರೆ. ಬೆಂಕಿಯಿಂದ ಬಚಾವ್ ಆಗುತ್ತಾರೆ. ಆಗ ಅವರಿಗೆ ಆಶ್ಚರ್ಯವಾಗುತ್ತದೆ. ಈ ಕಲ್ಲಿನ ಪೊಟರೆ ನಮ್ಮನ್ನು ಬದುಕಿಸಿತು ಎಂಬ ಭಾವನೆಯಿಂದ ಆ ಕಲ್ಲಿನ ಗುಹೆಗೆ ನಮಸ್ಕಾರ ಮಾಡಿ ಅಲ್ಲೇ ವಾಸ ಮಾಡಲು ತೀರ್ಮಾನಿಸುತ್ತಾರೆ. ಮರ ಮತ್ತು ಕಲ್ಲಿಗೆ ನಮಸ್ಕಾರ ಮಾಡುವ ಸಂಸ್ಕೃತಿ ಅಲ್ಲಿಂದಲೇ ಶುರುವಾಗುತ್ತದೆ. ಆಗ ಮನುಷ್ಯನಲ್ಲಿ ಕೃತಜ್ಞತೆ ಸಲ್ಲಿಸುವ ಆಚರಣೆ ಮುಂದುವರಿಯುತ್ತದೆ.

ಹೀಗೆ ಮನುಷ್ಯನ ಬೆಳವಣಿಗೆ ಆಗುತ್ತಿದ್ದಾಗಲೆ ಹತ್ತು ಇದ್ದವರು ನೂರು ಆಗುತ್ತಾರೆ. ನೂರು ಇದ್ದವರು ಸಾವಿರ ಆಗುತ್ತಾರೆ. ಸಾವಿರ ಇದ್ದವರು ಲಕ್ಷ ಆಗುತ್ತಾರೆ. ಜನಸಂಖ್ಯೆ ಜಾಸ್ತಿ ಆಗುತ್ತಿರುವಾಗಲೆ ಅವರಲ್ಲೆ ಒಬ್ಬ ಯಜಮಾನ, ನಾಯಕ, ಶ್ಯಾನುಬೋಗ, ಕುಬೇರ, ಪಟೇಲ, ಗೌಡ, ಹೆಗಡೆಯವರು ಅಂತ ಸೃಷ್ಟಿಯಾಗುತ್ತಾರೆ. ಮಾತನಾಡುವ ಕಲೆ, ವ್ಯಾಪಾರ, ವ್ಯವಹಾರ, ಕೊಡುಕೊಳ್ಳುವಿಕೆ ಸೃಷ್ಟಿಯಾಗುತ್ತವೆ. ಯಜಮಾನಿಕೆ ಮಾಡಲು ಶುರುವಾಗುತ್ತದೆ. ಎಲ್ಲರಿಗೂ ಮಾರ್ಗದರ್ಶನ ಮಾಡುತ್ತ ಬದುಕುತ್ತಿರುವಾಗ, ಜೀವನ ಕಳೆಯುತ್ತಿರುವಾಗ, ಅವರಲ್ಲೆ ಜಗಳಗಳಾಗಿ, ಪ್ರಕೃತಿಯ ವಿಕೋಪಕ್ಕೆ ಸಿಲುಕಿ ಹಲವಾರು ಗುಂಪುಗಳಾಗಿ ದೂರವಾಗುತ್ತಾರೆ.

ಯಜಮಾನ ಎನಿಸಿಕೊಳ್ಳುವ ವ್ಯಕ್ತಿ ವರ್ಷಗಳು ಕಳೆದಂತೆ ವಯೋಸಹಜವಾಗಿ ಸಾವನ್ನಪ್ಪುತ್ತಾನೆ. ಮಾರ್ಗದರ್ಶಕರಂತಿದ್ದ ಆ ವ್ಯಕ್ತಿ ದೂರವಾದಂತೆ ಅವನ ನೆನಪಿಗಾಗಿ, ಅವನ ಆಶೀರ್ವಾದಕ್ಕಾಗಿ ಅವನ ದೇಹವನ್ನು ಅವರು ಬದುಕುವ ಸ್ಥಳದಲ್ಲೆ ಸಮಾಧಿ ಮಾಡುತ್ತಾರೆ. ಆ ಸಮಾಧಿಯನ್ನು ಹಾಳಾಗದಂತೆ ಕಾಪಾಡಿಕೊಳ್ಳಲು ಒಬ್ಬ ವ್ಯಕ್ತಿಯನ್ನು ನೇಮಕ ಮಾಡುತ್ತಾರೆ. ಅವನು ಪ್ರತಿನಿತ್ಯ ಆ ಸಮಾಧಿಗೆ ಪ್ರಕೃತಿಯಲ್ಲಿ ಸಿಗುವ ವಸ್ತುಗಳಿಂದ ಪೂಜೆ, ಪುನಸ್ಕಾರ ಮಾಡುತ್ತ, ಪ್ರಾಣಿ, ಪಕ್ಷಿಗಳು, ಕಳ್ಳಕಾಕರಿಂದ ರಕ್ಷಿಸಿಕೊಳ್ಳುತ್ತ, ಬಂದಂತಹ ಬಂಧುಗಳಿಗೆಲ್ಲ ಪೂಜೆ ಮಾಡಿ ತೀರ್ಥ–ಪ್ರಸಾದ ರೂಪದಲ್ಲಿ ಹಣ್ಣು–ಹಂಪಲು ಕೊಡುತ್ತ ಹೋಗುತ್ತಾರೆ. ಅದು ಮುಂದೊಂದು ದಿನ ದೇವಸ್ಥಾನ ರೂಪ ಪಡೆದುಕೊಳ್ಳುತ್ತದೆ. ಆಚರಣೆ, ಪರಂಪರೆ, ಸಂಪ್ರದಾಯ, ಸಂಸ್ಕಾರ ಎನ್ನುವುದು ಅಲ್ಲಿಂದಲೆ ಶುರುವಾಗುತ್ತದೆ. ಮಾನವ ನಾಗರಿಕತೆಯನ್ನು

ಪಡೆದುಕೊಳ್ಳುತ್ತಿರುವಾಗಲೆ ವಸ್ತು, ವಿಷಯಗಳ ಬಗ್ಗೆ, ಪ್ರಪಂಚದ ಬಗ್ಗೆ, ಪ್ರಾಣಿ, ಪಕ್ಷಿಗಳ ಬಗ್ಗೆ, ಪ್ರಕೃತಿಯ ಬಗ್ಗೆ, ಸಂಬಂಧಗಳ ಬಗ್ಗೆ ತಿಳಿದುಕೊಳ್ಳುತ್ತಾನೆ.

ಯಜಮಾನ ಅಥವಾ ಹಿರಿಯ ಎಂಬ ವ್ಯಕ್ತಿ ಸಾವನ್ನಪ್ಪಿರುವುದರಿಂದ ಆ ವ್ಯಕ್ತಿಗೆ ಗೌರವ ಸಲ್ಲಿಸುವುದಕ್ಕೋಸ್ಕರ ಎಲ್ಲರೂ ಒಟ್ಟಾಗಿ ಸೇರಿ ಸಮಾಧಿಯ ಸ್ಥಳದಲ್ಲಿ ಹಾಡುವುದು, ಕುಣಿಯುವುದು, ಕುಸ್ತಿ ಮಾಡುವುದು, ಕತ್ತಿ ವರಸೆ, ಜಾದು, ದೊಣ್ಣೆ ವರಸೆ, ನೆಗೆಯುವುದು, ಕೋಲಾಟ, ಹೆಂಡ, ಸರಾಯಿ, ಬಂಗಿ ಸೇದುವುದು, ವಾದ್ಯಗಳನ್ನು ನುಡಿಸುವುದು, ಪ್ರಾಣಿ ಪಕ್ಷಿಗಳ ಜೊತೆಗೆ ಆಟ ಆಡುವುದು, ಇತರೆ ಕಲೆಗಳ ಪ್ರದರ್ಶನ ಮಾಡುವುದು ಹೀಗೆ ಹಬ್ಬ, ಹರಿದಿನ ಮದುವೆ, ಮುಂಜಿಗಳಲ್ಲಿ ಸ್ಮರಣೆಯ ರೂಪದಲ್ಲಿ ಪೂಜೆ, ಪುನಸ್ಕಾರ, ಪುರಸ್ಕಾರ ಮಾಡುತ್ತ ಹೋಗುತ್ತಾರೆ. ತದನಂತರದಲ್ಲಿ ಅದು ಶಾಸ್ತ್ರ, ಸಂಪ್ರದಾಯ, ಆಚರಣೆ, ಪರಂಪರೆ, ನಂಬಿಕೆ ಎನಿಸಿಕೊಳ್ಳುತ್ತದೆ. ಅದು ರೂಢಿಯಾಗುತ್ತದೆ. ಕೆಲವು ವರ್ಷಗಳ ನಂತರ ಆ ವ್ಯವಸ್ಥೆಯನ್ನು ಹಿರಿಯ ಮುಖಂಡರು ಒಂದು ಕಾರ್ಯರೂಪಕ್ಕೆ ತರುತ್ತಾರೆ. ಇದೆಲ್ಲವನ್ನು ನಾವು ಜನಪದ ಎಂದು ಕರೆಯುತ್ತೇವೆ. ಅವರು ಮಾಡುವ ಕೆಲಸ ಕಾರ್ಯಗಳೆಲ್ಲವೂ ಜನಪದ ಎನಿಸಿಕೊಂಡರೆ, ಅದನ್ನು ಮುಂದುವರೆಸಿಕೊಂಡು ಹೋಗುವ ಪ್ರಕ್ರಿಯೆಗೆ ರಂಗಭೂಮಿ ಎನ್ನುತ್ತಾರೆ. ಅಂದರೆ ಆ ಸಮಾಧಿಯ ಸ್ಥಳವನ್ನು ರಂಗಸ್ಥಳ ಎಂತಲೂ, ಸಮಾಧಿಯ ಗುರುತಿಗೆ ಒಂದು ಕಲ್ಲನ್ನು ಹಾಕಿರುತ್ತಾರೆ, ಅಥವಾ ಒಂದು ಗಿಡವನ್ನು ಬೆಳೆಸಿರುತ್ತಾರೆ. ಅದನ್ನು ರಂಗಸಜ್ಜಿಕೆ ಎಂತಲೂ, ಅಲ್ಲಿ ಪೂಜೆ, ಪುನಸ್ಕಾರ ಮಾಡುವ ವ್ಯಕ್ತಿ ಮಂತ್ರ ಹೇಳುವುದು, ಹಾಡು ಹಾಡುವುದು, ಕುಣಿಯುವುದು, ನುಡಿಸುವುದು, ಅಭಿನಯಿಸುವುದು ಇದೆಲ್ಲವನ್ನೂ ಮಾಡುವುದರಿಂದ ಅವನನ್ನು ನಟ, ಕಲಾವಿದ ಎಂತಲೂ, ಬಂದಿರುವ ಭಕ್ತಾದಿಗಳನ್ನೆಲ್ಲ ಪ್ರೇಕ್ಷಕರು ಎಂತಲೂ ಕರೆಯಬಹುದು. ಅಲ್ಲಿಯೆ ಜನಪದ ಮತ್ತು ರಂಗಭೂಮಿ ಎನ್ನುವುದು ಒಟ್ಟಿಗೆ ಸೃಷ್ಟಿಯಾಗುತ್ತದೆ ಅಥವಾ ಹುಟ್ಟಿಕೊಳ್ಳುತ್ತದೆ ಎಂಬ ಕಲ್ಪನೆಯಿದೆ.

ಹೀಗೆ ಹಲವಾರು ವರ್ಷಗಳು ಕಳೆದಂತೆ ಜನಸಂಖ್ಯೆ ಜಾಸ್ತಿ ಆಗುತ್ತ ಒಂದು ಭಾಗದಲ್ಲಿರುವ ಜನರು ಮತ್ತೊಂದು ಭಾಗಕ್ಕೆ, ಮತ್ತೊಂದು ಭಾಗದಲ್ಲಿರುವ ಜನರು ಇನ್ನೊಂದು ಭಾಗಕ್ಕೆ ತಮ್ಮತಮ್ಮ ದೈನಂದಿನ ಚಟುವಟಿಕೆಗಳಿಗೋಸ್ಕರ, ಕೆಲಸ ಕಾರ್ಯಗಳಿಗೋಸ್ಕರ ಮತ್ತು ಆಹಾರ ಹುಡುಕುತ್ತ ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಬರುತ್ತಾರೆ. ಆಗ ಒಬ್ಬರಿಗೊಬ್ಬರು ಮುಖಾಮುಖಿ ಆಗುತ್ತಾರೆ. ಎಲ್ಲರಿಗೂ ಆಶ್ಚರ್ಯವಾಗುತ್ತದೆ. ಭಯಪಡುತ್ತಾರೆ. ಸಾಯಿಸಿಬಿಡಬಹುದು, ತಮ್ಮ ವೈರಿಗಳಿರಬಹುದು ಎಂಬ ಭಯದಿಂದ, ಕೋಪದಿಂದ ಜಗಳವಾಡಲು ಶುರು ಮಾಡುತ್ತಾರೆ. ಅದರಲ್ಲಿ ಒಬ್ಬ ನಾಯಕ ನೀವು ಯಾರು ಎಲ್ಲಿಯವರು ಎಂದು ವಿಚಾರಿಸುತ್ತಾನೆ, ಪ್ರಶ್ನೆ ಮಾಡುತ್ತಾನೆ. ನಂತರ ಗೊತ್ತಾಗುತ್ತದೆ ಅವರು ನಮ್ಮ ಹಾಗೆ ಜನರು ಎಂದು, ಮನುಷ್ಯರೆಂದು ತಿಳಿದು ಎಲ್ಲರೂ ರಾಜಿಯಾಗುತ್ತಾರೆ. ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಾರೆ. ನೋಡ್ರಪ್ಪ, ನಾವು ನಿಮ್ಮ ಹಾಗೆ ಮನುಷ್ಯರೇ. ನೀವು ನಮ್ಮ ಹಾಗೆ ಮನುಷ್ಯರೆ.

ನಾವು ನಿಮಗೆ ತೊಂದರೆ ಕೊಡುವುದಿಲ್ಲ. ನೀವು ನಮಗೆ ತೊಂದರೆ ಕೊಡಬೇಡಿ ಎಂದು ಒಪ್ಪಂದ, ಸಂಧಾನ ಮಾಡಿಕೊಳ್ಳುತ್ತಾರೆ. ಎಲ್ಲರೂ ಒಟ್ಟಿಗೆ ಸೇರಿ ಬಾಂಧವ್ಯ, ಸಂಬಂಧ ಬೆಳೆಸುತ್ತಾರೆ. ದಿನಗಳು ಕಳೆದಂತೆ ಪಕ್ಕದ ಊರಿನ ಜನರು ಅವರ ಊರಿನ ಹಬ್ಬ, ಮದುವೆ, ಉತ್ಸವ, ಜಾತ್ರೆಗೆ ಎಂದು ಇನ್ನೊಂದು ಪಕ್ಕದ ಊರಿನ ಜನರನ್ನು ಆಹ್ವಾನಿಸುತ್ತಾರೆ. ಅವರ ಆಚಾರ, ವಿಚಾರ, ಶಾಸ್ತ್ರ, ಸಂಪ್ರದಾಯ, ಉಡುಗೆ, ತೊಡುಗೆ, ಊಟ, ತಿಂಡಿ, ಹಾಡು, ಕುಣಿತ, ಅಭಿನಯ ಎಲ್ಲವನ್ನೂ ನೋಡಿ ಸಂತೋಷಪಡುತ್ತಾರೆ. ಅವರ ಪ್ರತಿಭೆಯನ್ನು ಹೊಗಳುತ್ತಾರೆ. ಅಲ್ಲಿ ಜನರ ಪದಗಳನ್ನು ಗುರುತಿಸುತ್ತಾರೆ. ಮತ್ತೊಂದು ದಿನ ಇನ್ನೊಂದು ಪಕ್ಕದ ಊರಿನವರು ಅವರು ಆಚರಿಸುವ ಹಬ್ಬ, ಮದುವೆ, ಜಾತ್ರೆಗೆ, ಉತ್ಸವಕ್ಕೆ ಎಲ್ಲರನ್ನೂ ಆಹ್ವಾನಿಸುತ್ತಾರೆ. ಈ ಊರಿನ ಜನರ ಶಾಸ್ತ್ರ, ಸಂಪ್ರದಾಯ, ಆಚರಣೆ ಎಲ್ಲವನ್ನೂ ಗುರುತಿಸುತ್ತಾರೆ. ಪ್ರಶಂಸೆ ಮಾಡುತ್ತಾರೆ, ಹೊಗಳುತ್ತಾರೆ. ಸಂತೋಷಪಡುತ್ತಾರೆ. ಒಬ್ಬರಿಗೊಬ್ಬರು ತಮ್ಮ ತಮ್ಮ ಸಂಸ್ಕೃತಿಯನ್ನು ಪರಿಚಯ ಮಾಡಿಕೊಳ್ಳುತ್ತಾರೆ. ಅದಲು ಬದಲು/ವಿನಿಮಯ ಮಾಡಿಕೊಳ್ಳುತ್ತಾರೆ. ಅದೇ ಮುಂದೆ ಒಂದು ದಿನ ಜನಪದವಾಗಿ ಉಳಿದುಕೊಳ್ಳುತ್ತದೆ. ಇದನ್ನೆ ವಿದ್ವಾಂಸರು ಜನರ ಬಾಯಿಂದ ಬಾಯಿಗೆ ಬಂದಂತಹದ್ದಾಗಿದೆ. ಅದು ಜನಪದವಾಗಿದೆ ಎಂದು ಕರೆಯಲಾಗಿದೆ ಎನ್ನುತ್ತಾರೆ.

ಒಂದು ಪ್ರದೇಶದಲ್ಲಿ ಇದ್ದ ಜನರು ಮತ್ತೊಂದು ಪ್ರದೇಶದ ಜನರಿಗೆ ಪರಿಚಯವಿರುವುದಿಲ್ಲ. ಆಗಿನ ಕಾಲದಲ್ಲಿ ಜನಸಂಖ್ಯೆ ಕಡಿಮೆ ಇದ್ದುದರಿಂದ ಜನ ಅಲ್ಲೆ ಹುಟ್ಟಿ ಅಲ್ಲೆ ಬೆಳೆದು ಅಲ್ಲೆ ಸಾಯುತ್ತಿದ್ದರು. ಜನಸಂಖ್ಯೆ ಜಾಸ್ತಿ ಆಗುತ್ತಿದ್ದಾಗಲೇ ಒಬ್ಬರಿಗೊಬ್ಬರು ಪರಿಚಯವಾಗುತ್ತಾರೆ. ನಂತರದಲ್ಲಿ ದೆವ್ವ, ಪಿಶಾಚಿ, ಭೂತ, ಪ್ರೇತ, ದೇವರು, ದಿಂಡರು, ಸ್ವಾಮಿಗಳು, ಗುರುಗಳು, ಬುದ್ಧಿಯವರು ಹೀಗೆ ಎಲ್ಲವೂ ಸೃಷ್ಟಿಯಾಗುತ್ತದೆ. ಮೊದಲು ನಮ್ಮ ಪೂರ್ವಜರು ಲೋಕಾರೂಢಿ, ಲೋಕಾಚರಣೆ, ಲೋಕಜ್ಞಾನ, ಪದ, ಆಡು, ಹಾಡು, ಸಂಪ್ರದಾಯ, ಲೋಕ ಚರಿತೆ ಇತರೆ ಪದಗಳಿಂದ ಕರೆಯುತ್ತಿದ್ದರು. ಮನುಷ್ಯ ನಾಗರಿಕತೆಯನ್ನು ಪಡೆದ ನಂತರ ಅಥವಾ ಶಿಕ್ಷಣವನ್ನು ಪಡೆದ ಕಾಲಕ್ರಮೇಣ ಆ ಪದಗಳೆಲ್ಲ ಮರೆತು ಹೋಗಿ ಜನರ ಬಾಯಿಂದ ಬಂದ ಪದಗಳೆಂದು ಕರೆದಿರಬಹುದು ಎನ್ನಲಾಗಿದೆ. ಹಾಗಾಗಿ ಜನಪದ ಎಂಬ ಪದ ಈಗ ರೂಢಿಯಲ್ಲಿದೆ ಮತ್ತು ಬಳಕೆಯಲ್ಲಿದೆ. ಮುಂದುವರೆದಂತೆ ಕನ್ನಡ ನಾಡಿನ ವಿದ್ವಾಂಸರೆಲ್ಲ ಜನಪದದ ಬಗ್ಗೆ ಚರ್ಚೆ ಮಾಡುತ್ತ ಜನಪದ ಮತ್ತು ಜಾನಪದದ ಬಗ್ಗೆ ಹಲವಾರು ಸಂವಾದಗಳು, ಚರ್ಚೆಗಳು, ವಿಶ್ಲೇಷಣೆಗಳು, ವಿಮರ್ಶೆಗಳು ನಡೆಯುತ್ತವೆ.

ಕನ್ನಡ ನಾಡಿನ ಸಂಸ್ಕೃತಿಯನ್ನು, ಸಂಪ್ರದಾಯವನ್ನು ಕೆಲವು ಜನರು ಜನಪದ ಎಂದು ಕರೆದರೆ, ಇನ್ನೊಂದು ವರ್ಗದ ವಿದ್ವಾಂಸರು ಒಟ್ಟಾರೆ ಸಂಸ್ಕೃತಿಯನ್ನು ಜಾನಪದ ಎಂದು ಕರೆಯುತ್ತಾರೆ. ಹೀಗೆ ಚರ್ಚೆ ಮುಂದುವರೆಯುತ್ತ ಈ ಜನಪದ ಮತ್ತು ಜಾನಪದ ವ್ಯತ್ಯಾಸದ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಪಡುತ್ತಾರೆ. ಅದರಲ್ಲಿ ಬಹಳ ಮುಖ್ಯವಾದ ಒಬ್ಬ ವ್ಯಕ್ತಿ, ಒಬ್ಬ ಜಾನಪದ ವಿದ್ವಾಂಸ ಎಂದರೆ ಡಾ.

ಹಾ.ಮಾ.ನಾಯಕ ಅವರು. ಇವರು ಒಂದು ಸಾರಿ ವಿದೇಶ ಪ್ರವಾಸಕ್ಕೆ ಹೋಗಿ ಅಧ್ಯಯನ ಮಾಡುತ್ತ ಇಂಗ್ಲೆಂಡಿನ ಡಬ್ಲ್ಯು.ಜೆ. ಥಾಮ್ಸ್ ಅವರು ಬರೆದಿರುವ ಒಂದು ಲೇಖನವನ್ನು ಓದುತ್ತಾರೆ. ದಿ. ಅಥೇನಿಯಂ ಎಂಬ ಪತ್ರಿಕೆಯಲ್ಲಿ ೧೮೪೬ ಆಗಸ್ಟ್ ೧೨ರಲ್ಲಿ ಪ್ರಕಟವಾದ ಲೇಖನವನ್ನು ಓದುವಾಗ ಫೋಕ್ ಮತ್ತು ಫೋಕ್‌ಲೋರ್ ಎಂಬ ಎರಡು ಪದಗಳ ವ್ಯತ್ಯಾಸವನ್ನು ತಿಳಿದುಕೊಳ್ಳುತ್ತಾರೆ. ಇಂಗ್ಲೆಂಡಿನಲ್ಲಿ ಡಬ್ಲ್ಯು.ಜೆ.ಥಾಮ್ಸ್ ಅವರು ಸುಮಾರು ೨೦ ವರ್ಷಗಳ ಕಾಲ ಆಸ್ಪತ್ರೆಯಲ್ಲಿ ಗುಮಾಸ್ತರಾಗಿ ಕಾರ್ಯನಿರ್ವಹಿಸುತ್ತಾ ಜನಪದದ ಮೇಲಿನ ಅಭಿಮಾನದಿಂದ ಸಂಶೋಧನೆಗಳನ್ನು ಮಾಡಿ 'ಫೋಕ್' ಮತ್ತು 'ಫೋಕ್‌ಲೋರ್' ಬಗ್ಗೆ ಇರುವ ವ್ಯತ್ಯಾಸವನ್ನು ಉಲ್ಲೇಖಿಸುತ್ತಾರೆ. ಆ ಒಂದು ಪುರಾವೆಯ ಮೇಲೆ ಡಾ.ಹಾ.ಮಾ. ನಾಯಕರು ಜಾನಪದದ ಬಗ್ಗೆ ತಮ್ಮ ಅಭಿಪ್ರಾಯವನ್ನು 1966ರಲ್ಲಿ ಮೈಸೂರು ವಿವಿಯ ಸುವರ್ಣ ಮಹೋತ್ಸವ ಸಮಾರಂಭದ ಅಂಗವಾಗಿ ಜಾನಪದ ಸಾಹಿತ್ಯ ಮತ್ತು ಅದರ ಸ್ವರೂಪ ಕುರಿತ ವಿಚಾರ ಸಂಕಿರಣವೊಂದರಲ್ಲಿ ಹಾ.ಮಾ. ನಾಯಕ್‌ರವರು ಫೋಕ್‌ಗೆ ಸಮನಾಗಿ ಜಾನಪದವೆಂದು, ಲೋರ್‌ಗೆ ಸಮನಾಗಿ ಜ್ಞಾನವೆಂದು ಬಳಸುವುದರಿಂದ ಅದು ಫೋಕ್‌ಲೋರ್ ಆಗುತ್ತದೆ ಎನ್ನುತ್ತಾರೆ. ಜನಪದರ ಜ್ಞಾನವೇ ಜಾನಪದ ಎಂದು ಕರೆಯುತ್ತಾರೆ. ಎಲ್ಲಾ ಜನಪದ ಸಮೂಹವನ್ನು ಒಳಗೊಂಡದ್ದು ಜಾನಪದ ಎಂದು ಸೂಚಿಸಿದರು. ಹಾಗೂ ಅಧ್ಯಕ್ಷೀಯ ಭಾಷಣದಲ್ಲಿ ಪ್ರಸ್ತುತಪಡಿಸಿ ಗೊಂದಲವನ್ನು ಬಗೆಹರಿಸುತ್ತಾರೆ. ಅಲ್ಲಿಂದ ಎಲ್ಲಾ ವಿದ್ವಾಂಸರು ಜನಪದ ಮತ್ತು ಜಾನಪದದ ವ್ಯತ್ಯಾಸವನ್ನು ತಿಳಿದುಕೊಂಡು ಅದರ ಬಳಕೆಯನ್ನು ಚಾಲ್ತಿಗೆ ತರುತ್ತಾರೆ.

ಒಬ್ಬ ವಿದ್ವಾಂಸರ ಪ್ರಕಾರ ಒಂದು ಪ್ರದೇಶದ ಸಂಸ್ಕೃತಿಯನ್ನು ಜನಪದ ಎಂದು ಕರೆದರೆ, ಆ ಪ್ರದೇಶದ ಒಟ್ಟಾರೆ ಸಂಸ್ಕೃತಿಯನ್ನು ಜಾನಪದ ಎಂದು ಕರೆಯಲಾಗಿದೆ ಎನ್ನುತ್ತಾರೆ. ಇನ್ನೊಬ್ಬ ವಿದ್ವಾಂಸರ ಪ್ರಕಾರ ಹಾಡು, (ಸಂಗೀತ) ಕುಣಿತ, (ನೃತ್ಯ) ಅಭಿನಯ, (ನಾಟಕ) ಇವೆಲ್ಲವನ್ನೂ ಜನಪದ ಎಂದು ಕರೆದರೆ, ಶಾಸ್ತ್ರ ಸಂಪ್ರದಾಯ, ಆಚರಣೆ, ಪರಂಪರೆ, ಪೂಜೆ, ಪುನಸ್ಕಾರ ಎಲ್ಲವನ್ನೂ ಸೇರಿಸಿ ಜಾನಪದ ಎಂದು ಕರೆಯಲಾಗಿದೆ ಎಂಬುದು ವಿದ್ಯಾಂಸರ ಅಭಿಪ್ರಾಯವಾಗಿದೆ. ಅಂದರೆ ಹುಟ್ಟು, ಸಾವು, ಮದುವೆ, ಮುಂಜಿ, ಹಬ್ಬ, ಹರಿದಿನ, ನಾಮಕರಣ, ತಿಥಿ ಕಾರ್ಯಗಳು, ಊಟ, ತಿಂಡಿ, ಉಡುಗೆ–ತೊಡುಗೆ, ಜಾದು, ಮಾಟ–ಮಂತ್ರ, ಹೆಂಡ, ಸಾರಾಯಿ, ಸೀಮಂತ, ಋತುಮತಿ ಈ ತರದ ಎಲ್ಲಾ ಕ್ರಿಯೆಗಳನ್ನು ಜಾನಪದ ಎಂದು ಕರೆಯಲಾಗಿದೆ ಎನ್ನುವರು. ಆದರೆ ಒಂದೊಂದು ಪ್ರದೇಶದಲ್ಲಿ ಪ್ರಾದೇಶಿಕವಾಗಿ ಆಚಾರ, ವಿಚಾರ, ಆಚರಣೆಗಳು ವಿವಿಧ ರೀತಿಯಲ್ಲಿ ಇರುತ್ತವೆ. ಆದ್ದರಿಂದ ಒಂದು ಪ್ರದೇಶದ ಸಂಸ್ಕೃತಿಯನ್ನು ಜನಪದ ಎಂದು ಕರೆದರೆ, ಎಲ್ಲಾ ಪ್ರದೇಶಗಳ ಅಥವಾ ಬೇರೆಬೇರೆ ಪ್ರದೇಶಗಳ ಒಟ್ಟಾರೆ ಸಂಸ್ಕೃತಿಯನ್ನು ಜಾನಪದ ಎಂದು ಕರೆಯಲಾಗಿದೆ.

ಸಾವಿರಾರು ವರ್ಷಗಳ ಹಿಂದಿನ ಅಥವಾ ಹಳೆಯದಾದ ವಸ್ತುವನ್ನು ವಿಷಯ, ವಿಚಾರವನ್ನು ಇಂದು ನಾವು ಜನಪದ ಎಂದು ಕರೆದರೆ, ಇವತ್ತಿನ ವಸ್ತು ವಿಷಯವನ್ನು ಮುಂದೊಂದು ದಿನ ಅಥವಾ ಐನೂರು ವರ್ಷಗಳು ಕಳೆದ ನಂತರ ಅದನ್ನು ಏನೆಂದು ಕರೆಯಬಹುದು ಎಂಬ ಪ್ರಶ್ನೆ ಉದ್ಭವವಾಗುತ್ತದೆ.

ಪೂರ್ವಜರ ಕಾಲಘಟ್ಟವೇ ಬೇರೆ ಮತ್ತು ಆಧುನಿಕ ಕಾಲಘಟ್ಟವೇ ಬೇರೆ. ಆದ್ದರಿಂದ ಇವತ್ತು ಮನುಷ್ಯನ ಅನುಭವಕ್ಕಿಂತ ವಿಜ್ಞಾನ, ತಂತ್ರಜ್ಞಾನ, ಯಂತ್ರಜ್ಞಾನದ ಮೂಲಕ ಪ್ರತಿಯೊಂದು ವಸ್ತು ವಿಷಯವನ್ನು ಕಂಡುಹಿಡಿಯಲಾಗುತ್ತಿದೆ. ಅದನ್ನು ಜನಪದ ಎಂದು ಹೇಳಲು ಬರುವುದಿಲ್ಲ. ಏಕೆಂದರೆ ಅದು ಲಿಖಿತ ಮತ್ತು ಪ್ರಯೋಗ ರೂಪದಲ್ಲಿ ಇರುತ್ತದೆ. ಮೌಖಿಕ ಪರಂಪರೆಗಿಂತ, ಆದೇಶಕ್ಕಿಂತ ಅಥವಾ ಸಂದೇಶಕ್ಕಿಂತ ಪ್ರಯೋಗಾತ್ಮಕ ವಿಶ್ಲೇಷಣೆಯೇ ಮುಖ್ಯವಾಗಿರುತ್ತದೆ. ಬಾಯಿಂದ ಬಾಯಿಗೆ ಬರುವ ಅಥವಾ ಯಾವುದೇ ವ್ಯಕ್ತಿಯಿಂದ ವ್ಯಕ್ತಿಗೆ ವರ್ಗಾವಣೆಯಾಗುವ ಯಾವುದೇ ಹೇಳಿಕೆಗಳು ಕಾರ್ಯರೂಪಕ್ಕೆ ಬರುವುದಿಲ್ಲ. ಹಾಗಾಗಿ ಯಾವುದು ಲಿಖಿತ ರೂಪದಲ್ಲಿರುವುದಿಲ್ಲವೋ ಅದು. ಮತ್ತು ಯಾವುದು ಬಾಯಿಂದ ಬಾಯಿಗೆ ವರ್ಗಾವಣೆಯಾಗಿರುತ್ತದೋ ಅದನ್ನು ಜಾನಪದ ಎಂದು ಕರೆಯಲಾಗಿದೆ.

ಜಾನಪದದ ಅರ್ಥ ಮತ್ತು ವ್ಯಾಖ್ಯಾನ :- ಜಾನಪದ ಎನ್ನುವ ಪದ ಇಂಗ್ಲೀಷಿನಲ್ಲಿ ಫೋಕ್ಲೋರ್ ಎಂಬುದಕ್ಕೆ ಸಮಾನಾರ್ಥಕವಾಗಿ ಬಳಸಿರುವ ಕನ್ನಡ ಪದ. ಫೋಕ್ಲೋರ್ ಎನ್ನುವುದು ಫೋಕ್ ಮತ್ತು ಲೋರ್ ಎಂಬ ಎರಡು ಪ್ರತ್ಯೇಕ ಅರ್ಥಉಳ್ಳ ಪದಗಳ ಸಂಯೋಗದಿಂದ ಕೂಡಿದೆ. ಫೋಕ್ ಎನ್ನುವುದಕ್ಕೆ ಜನಪದ ಎಂತಲೂ, ಲೋರ್ ಎನ್ನುವುದಕ್ಕೆ ಜ್ಞಾನ ಎಂತಲೂ ಕರೆಯಲಾಗಿದೆ. ಜನಪದರ ಸಾಹಿತ್ಯ, ಸಂಗೀತ, ನೃತ್ಯ, ಆಟ, ಈ ಎಲ್ಲವನ್ನೂ ಒಳಗೊಂಡಿದ್ದೇ ಜಾನಪದ ಎಂದು ಹೇಳಬಹುದು. ಮನುಷ್ಯನ ಬದುಕಿನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿ ತಲೆತಲೆಮಾರುಗಳಿಂದ ಬಂದಿರುವ ಮೌಖಿಕ ಪರಂಪರೆಯಲ್ಲಿ ಸಂಬಂಧ ಜ್ಞಾನವೇ ಜಾನಪದ. ಜಾನಪದ ಎಂದರೇನು? ಎಂಬುದರ ಕುರಿತು ಭಾರತೀಯ ಹಾಗೂ ವಿದೇಶೀ ವಿದ್ವಾಂಸರು ವ್ಯಾಖ್ಯಾನವನ್ನು ನೀಡಲು ಪ್ರಯತ್ನಿಸಿದ್ದಾರೆ. ವಿಶ್ವವಿದ್ಯಾಲಯಗಳಿಂದ ಶ್ರೇಷ್ಠ ಅಧ್ಯಯನ ಕೇಂದ್ರಗಳು ಕೈಗೊಂಡಾಗ ಮಾತ್ರ ಅದು ಸಮರ್ಪಕವಾಗಿ, ವ್ಯವಸ್ಥಿತವಾಗಿ ನಡೆಯಲು ಸಾಧ್ಯವಾಗುತ್ತದೆ. ಕರ್ನಾಟಕದಲ್ಲಿ ಜಾನಪದ ಅಧ್ಯಯನಕ್ಕೆ ಒಂದು ಸ್ಥಿರವಾದ ಬುನಾದಿಯನ್ನು ಪ್ರಪ್ರಥಮವಾಗಿ ಹಾಕಿಕೊಟ್ಟ ಕೀರ್ತಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಗೆ ಸಲ್ಲಬೇಕು. ಕರ್ನಾಟಕದ ಜಾನಪದ ಸಂಗ್ರಹದ ಇತಿಹಾಸವನ್ನು ಬರೆಯುವಾಗ ಸಾಮಾನ್ಯವಾಗಿ ಸಂಕಲನಗಳಲ್ಲಿ 'ಗರತಿ ಹಾಡು' ಸಮಗ್ರ ಜಾನಪದ ದೃಷ್ಟಿಯ ಗ್ರಂಥಗಳಲ್ಲಿ ಹುಟ್ಟಿದ ಹಳ್ಳಿ ಹಾಡುಗಳೆಂದು ಕೃತಿಗಳಲ್ಲಿ ಹೆಸರಿಸಲಾಗಿದೆ.

ಜಾನಪದ ಪ್ರಕಾರಗಳು ತಮ್ಮದೇ ಆದ ವೈಯಕ್ತಿಕ ಕಥಾವಸ್ತು ಮತ್ತು ಶಬ್ದಾರ್ಥದ ಹೊರೆಗಳನ್ನು ಹೊಂದಿವೆ. ಜಾನಪದವನ್ನು ಗಾದೆಗಳು, ಕಥನಗಳು, ಒಗಟುಗಳು, ಜನರ ಕಲಾ ಸಂಸ್ಕೃತಿಯನ್ನು ಸಾಂಪ್ರದಾಯಿಕವಾಗಿ ವಿಂಗಡಿಸಲಾಗಿವೆ. ಮೌಖಿಕ ಜಾನಪದ ಕಲೆ, ಸಂಗೀತ, ನೃತ್ಯ ಸೃಜನಶೀಲತೆ ಮತ್ತು ಸಂಯೋಜನೆ ಎಂದು ಜಾನಪದವನ್ನು ಬರೆಯುವ ಮೊದಲು ಹುಟ್ಟಿಕೊಂಡಿತು. ಜಾನಪದವು ಮಾತನಾಡುವ ಪದದ ಕಲೆ ಎಂದು ತಿಳಿಸಲಾಗಿದೆ. ಇದು ಸಾಹಿತ್ಯ ಮತ್ತು ಇತರ ಪ್ರಕಾರಗಳಿಂದ ಪ್ರತ್ಯೇಕಿಸುತ್ತದೆ. ಇದು ಸಾಮೂಹಿಕ ಸೃಜನಶೀಲತೆಯಾಗಿ ಹುಟ್ಟಿಕೊಂಡಿತು. ಒಂದು ಪ್ರಾಚೀನ ಸಮುದಾಯ ಮತ್ತು ಮನುಕುಲದ ವಿಚಾರಗಳನ್ನು ವ್ಯಕ್ತಪಡಿಸಿತು.

ತೊಟ್ಟಿಲು ತೂಗುತ್ತಾ, ರಾಗಿ ಬೀಸುತ್ತಾ, ದೋಣಿ ನಡೆಸುತ್ತಾ, ಗಾಡಿ ಓಡಿಸುತ್ತ, ನಾಟಿ ಹಾಕುತ್ತಾ, ರಾಟೆ ತಿರುಗಿಸುತ್ತಾ ನೇಯುವಾಗ, ನೂಲುವಾಗ, ಕುಣಿಯುವಾಗ ಹಾಡುವುದೆಲ್ಲವೂ ಗೀತೆಗಳಾದವು. ಚಳಿಗಾಲದಲ್ಲಿ ಬೆಂಕಿಯ ಸುತ್ತ ಕುಳಿತಾಗ ಬೇಸಿಗೆಯ ಬೆಳದಿಂಗಳಲ್ಲಿ ಬೀದಿಯಲ್ಲಿ ಕಲೆತಾಗ, ಊರ ಚಾವಡಿಗಳಲ್ಲಿ, ಮನೆಗಳ ಪಡಸಾಲೆಗಳ ಮೇಲೆ ಗುಂಪುಗೂಡಿದಾಗ ಹಬ್ಬ–ಹರಿದಿನಗಳಲ್ಲಿ ಒಂದೆಡೆ ಸೇರಿ ಹರಟೆ ಹೊಡೆಯುವಾಗ ಕಥೆಗಳ ಲಹರಿ ತಾನೇ ತಾನಾಗಿ ಉಕ್ಕಿ ಹರಿಯುತ್ತಿದ್ದವು. ಆಲೆಮನೆಯಲ್ಲಿ ಬೆಲ್ಲ ಕಾಯಿಸುವಾಗ, ಅಡಿಕೆ ಬೇಯಿಸುವಾಗ ಬದುಕಿನ ವರ್ತನ ವಿನ್ಯಾಸಗಳ ವೈವಿಧ್ಯಗಳು ಜರುಗಿದಾಗ ಗಾದೆಗಳು, ಒಗಟುಗಳು ತಾನೇ ತಾನಾಗಿ ಹೊರಬರುತ್ತಿದ್ದವು. ಹೆಣ್ಣು ಮಕ್ಕಳು ರಂಗೋಲಿ ಹಾಕುವಾಗ, ಚಾಪೆ ಹೆಣೆಯುವಾಗ, ಕಸೂತಿ ಕೆಲಸ ಮಾಡುವಾಗ, ಅಡುಗೆ ಬೇಯಿಸುವಾಗ, ಬಟ್ಟೆಗಳನ್ನು ಹೊಲಿಯುವಾಗ ಅವುಗಳೆಲ್ಲವನ್ನು ನೋಡಿ ಮಕ್ಕಳು ಕಲಿಯುತ್ತಿದ್ದವು. ತಂದೆ ಹೊಲ ಊಳುವಾಗ, ಬಿತ್ತುವಾಗ, ಎತ್ತುಗಳನ್ನು ಮೇಯಿಸುವಾಗ, ಮಳೆ, ಮೋಡ, ನಕ್ಷತ್ರಗಳನ್ನು, ಹೊತ್ತು ದಿಕ್ಕುಗಳನ್ನು ಸೂಚಿಸುವಾಗ ಮನೆಗೆಲಸಗಳನ್ನು ನಿರ್ವಹಿಸುವಾಗ, ಅವುಗಳನ್ನು ಮಕ್ಕಳು ನೋಡಿ ಕಲಿಯುತ್ತಿದ್ದವು. ಮರಗೆಲಸ, ಚಿನ್ನದ ಕೆಲಸ, ಕಬ್ಬಿಣದ ಕೆಲಸ, ಕಮ್ಮಾರಿಕೆ, ಚಮ್ಮಾರಿಕೆ, ನೇಯ್ಗೆ ಮೊದಲಾದ ಕಸುಬುಗಳು ವರ್ಗಾವಣೆಯಾಗುತ್ತಿದ್ದವು. ಇವುಗಳೆಲ್ಲವೂ ಓದಿ ಕಲಿತವುಗಳಲ್ಲ. ಆಡಿದ್ದನ್ನು, ನೋಡಿದ್ದನ್ನು, ಕೇಳಿದ್ದನ್ನು, ಮಾಡಿದ್ದನ್ನು ಕಲಿತವುಗಳಾಗಿವೆ. ಸಂಸ್ಕೃತಿಯ ನೆಲೆಗಳಲ್ಲಿ ಮನುಷ್ಯ ಬದುಕಿನ ಸಮಸ್ತ ವ್ಯವಹಾರಗಳು ಹೀಗೆಯೇ ನಡೆಯುತ್ತಿದ್ದವು. ಹೇಳಿದ್ದನ್ನು ನೆನಪಿಸಿಕೊಳ್ಳುತ್ತ, ನೋಡಿದ್ದನ್ನು ಅನುಕರಿಸುತ್ತ ಕೂಡುವುದು ಮತ್ತು ಕಳೆಯುವುದರ ನಡುವೆ ಹರಿದು ಬಂದಿರುವ ಇಂತಹ ಸಂಪ್ರದಾಯವನ್ನು ಮೌಖಿಕವಾಗಿ ಗುರುತಿಸಲಾಗಿದೆ.

ಜಾನಪದದ ಮೊತ್ತ ಮೊದಲ ವಿದ್ವಾಂಸ ಫ್ರಾನ್ಸಿಸ್ ಗ್ರಾಸ್ ಹೇಳುವ ಹಾಗೆ, ಒಂದು ದೇಶದ ಜಾನಪದ ಇತಿಹಾಸವನ್ನು ತಿಳಿಯದವನು ರಾಜನೂ ಆಗಲಾರ ಹಾಗೂ ರಾಜಕಾರಣಿಯೂ ಆಗಲಾರ ಎನ್ನುತ್ತಾನೆ. ಸುಮಾರು 17, 18ನೇ ಶತಮಾನದಲ್ಲಿ ಇಂಗ್ಲೆಂಡಿನ ಪಳೆಯುಳಿಕೆ ತಜ್ಞರು ಸಂಸ್ಕೃತಿಯ

ಮೂಲದಿಂದ ಆಕರ್ಷಿತರಾಗಿ, ಅಜ್ಞಾತವಾಗಿದ್ದ ಜ್ಞಾನಭಂಡಾರವನ್ನು ಶೋಧಿಸಲಾರಂಭಿಸುತ್ತಾರೆ. ಅನಕ್ಷರಸ್ತ ಹಳ್ಳಿ ಮತ್ತು ಗುಡ್ಡಗಾಡುಗಳ ಜನಸಮುದಾಯಗಳಿದ್ದ ಕಡೆ ಹೋಗಿ ಆಯಾ ಜನಸಮುದಾಯಗಳ ಸಂಸ್ಕೃತಿ, ಜೀವನ ಪದ್ಧತಿ, ಆಚಾರ ವಿಚಾರಗಳನ್ನು ಅವರುಗಳ ಭಾಷೆ, ಹಾಡು, ಕಥೆಗಳನ್ನು ಮತ್ತು ಅವರ ಕಲೆಗಳನ್ನು ಪ್ರತ್ಯಕ್ಷ ಕಂಡು ಮತ್ತು ಕೇಳಿ ಸಂಗ್ರಹಿಸಿದರು. ಅವರ ಹಬ್ಬ ಹರಿದಿನಗಳು ಹಾಡು, ಕುಣಿತಗಳು, ಹುಟ್ಟು, ಸಾವುಗಳು, ಮನೆ ಮಠಗಳು, ಒಡವೆ ವಸ್ತ್ರಗಳು, ದೇವರು, ದಿಂಡರು, ನಂಬಿಕೆ ಮೂಢ ನಂಬಿಕೆಗಳು, ನಡವಳಿಕೆಗಳು, ವೈದ್ಯ, ಮಾಟ, ಮಂತ್ರ, ತಂತ್ರಗಳು ಮೊದಲಾದ ಜೀವನ ಸಂಗತಿಗಳನ್ನು ಕುತೂಹಲದಿಂದ ಕಂಡು, ಕೇಳಿ ಬರೆದಿಟ್ಟುಕೊಂಡರು. ಹೀಗೆ ಗ್ರಾಮೀಣ ಬದುಕಿನ ಸಂಸ್ಕೃತಿ, ಸಾಹಿತ್ಯ ಶ್ರೇಷ್ಠತೆಯನ್ನು ನಾಗರಿಕ ಜಗತ್ತಿಗೆ ಎತ್ತಿ ತೋರಿಸುವ ಉತ್ತಮ ಕೆಲಸವನ್ನು ಮಾಡಿದರು. ಅದರ ಜೊತೆಗೆ ಸಾಹಿತಿಗಳು, ಧರ್ಮ ಪ್ರಚಾರಕರು, ದಾರ್ಶನಿಕರು, ಸರ್ಕಾರಿ ನೌಕರರು, ಸಂಸ್ಕೃತಿಪರವಾದ ಎಲ್ಲರೂ ಜೊತೆಗಿದ್ದರು.

ರಷ್ಯಾದಂತಹ ರಾಷ್ಟ್ರಗಳು ಜಾನಪದವನ್ನು ಆಧುನಿಕ ಬದುಕಿಗೆ ವ್ಯವಸ್ಥಿತವಾಗಿ ರೂಪಿಸಿದರು. ಫಿನ್‌ಲ್ಯಾಂಡಿನಂತಹ ದೇಶವು ರಾಷ್ಟ್ರೀಯ ಪ್ರಜ್ಞೆಯ ಸಂಕೇತವಾಗಿ ಸ್ವೀಕಾರ ಮಾಡಿತು. ಕಳೆದ 200 ವರ್ಷಗಳಿಂದೀಚೆಗೆ ಯೂರೋಪಿನ ಹಲವು ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಜಾನಪದವು ಒಂದು ಅಧ್ಯಯನದ ವಿಷಯವಾಗಿ ಮಾರ್ಪಟ್ಟಿದೆ. ಅಮೆರಿಕಾ ದೇಶದಂತಹ ವಿಶ್ವವಿದ್ಯಾಲಯವು ಸಹ ಜಾನಪದವನ್ನು ಒಂದು ಮುಖ್ಯ ಕಲಿಕಾ ವಿಷಯವಾಗಿ ಮಾಡಿದೆ. ಜಗತ್ತಿನ ಎಲ್ಲಾ ಜಾನಪದ ವಿದ್ವಾಂಸರು ಒಮ್ಮೆಯಾದರೂ ಈ ವಿಶ್ವವಿದ್ಯಾಲಯಕ್ಕೆ ಕಾಲಿರಿಸಲು ಬಯಸುತ್ತಾರೆ. ಕ್ಯಾಲಿಫೋರ್ನಿಯಾ, ಪೆನ್ಸಿಲ್ವೇನಿಯಾ ವಿವಿಗಳು ಒಂದು ಪ್ರತ್ಯೇಕ ವಿಷಯವನ್ನಾಗಿ ಬೋಧಿಸುತ್ತಿವೆ. ಅಧ್ಯಯನ ಮತ್ತು ಸಂಶೋಧನೆಗಾಗಿ ಪ್ರತ್ಯೇಕ ವಿಭಾಗಗಳನ್ನು ತೆರೆದಿವೆ. ಜರ್ಮನಿ, ಫ್ರಾನ್ಸ್, ಗ್ರೀಸ್, ಟರ್ಕಿ, ಸ್ಕಾಟ್ಲೆಂಡ್ ಮುಂತಾದ ದೇಶಗಳು ಜಾನಪದ ಅಧ್ಯಯನಕ್ಕೆ ಪ್ರೋತ್ಸಾಹ ನೀಡುತ್ತಿವೆ. ಕಿಟೆಲ್, ಗೋವರ, ಫ್ಲೀಟ್, ಡುಬಾಯಸ್ ಮುಂತಾದ ಜಾನಪದ ತಜ್ಞರು ನಮಗೆ ಜಾನಪದವನ್ನು ಕಲಿಸಿಕೊಟ್ಟಿದ್ದಾರೆ. ರಿಚರ್ಡ್ ಎಂ. ಡಾರ್ಸನ್‌ರವರು ಹೇಳುವಂತೆ ಜಾನಪದವು ಅತ್ಯಂತ ಆಕರ್ಷಕವಾದ ಒಂದು ಅಧ್ಯಯನದ ವಿಷಯವಾಗಿದೆ. ಇದು ವಿದ್ಯಾರ್ಥಿಗಳಿಗೆ ಆಸಕ್ತಿ ಹುಟ್ಟಿಸುವ ಕ್ಷೇತ್ರವಾಗಿದೆ ಹೀಗಾಗಿ ಜಾನಪದವನ್ನು ಜಾನಪದಕ್ಕಾಗಿಯೇ ಅಭ್ಯಾಸ ಮಾಡುವುದು ಯೋಗ್ಯವಾಗಿದೆ. ಮಾನವೀಯ ಮೌಲ್ಯಗಳ ದೃಷ್ಟಿಯಿಂದಲೂ ಇದು ಸಮರ್ಥನೀಯವಾಗಿದೆ.

ಜನತೆಯ ಬಗ್ಗೆ ಹೆಚ್ಚಿನ ಅರಿವು ಪಡೆಯುವುದಕ್ಕೆ ಜಾನಪದವು ಅಮೂಲ್ಯವಾದ ಮಾಹಿತಿಯನ್ನು ಒದಗಿಸುತ್ತದೆ. ಅಳಿದುಹೋದ ಸಂಸ್ಕೃತಿಯ ದಾಖಲೆಗಳು ಹಾಗೂ ಮಾನವನು ಸಾವಿರಾರು ವರ್ಷಗಳಿಂದ ಪಡೆದುಕೊಂಡು ಬಂದ ಅನುಭವ ಜಾನಪದದಲ್ಲಿ ಇದೆ. ಹೀಗಾಗಿ

ಜಾನಪದವು ಗತಕಾಲದ ಸಂಸ್ಕೃತಿಯ ದಾಖಲಾತಿಯೊಂದಿಗೆ ಸಮಕಾಲೀನವಾಗಿಯೂ ತನ್ನ ಚಲನಶೀಲತೆಯನ್ನು ಕಾಯ್ದುಕೊಂಡು ಬಂದಿರುವ ಅಪೂರ್ವ ಜ್ಞಾನ ವಿಜ್ಞಾನವಾಗಿದೆ. 19ನೇ ಶತಮಾನದ ಮಧ್ಯಭಾಗದಲ್ಲಿ ಫೋಕ್ಲೋರ್ ಎಂಬ ಪದ ಸೃಷ್ಟಿಯಾದ ಮೇಲೆ ಅದರ ವಿವರಣೆ, ಲಕ್ಷಣ, ನಿರೂಪಣೆಗಳಿಗೆ ಸಂಬಂಧಿಸಿದಂತೆ ಅನೇಕ ವಿದ್ವಾಂಸರು, ಅನೇಕ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ.

ಜನಪದ ಎಂಬ ಶಬ್ದ ಅನಾದಿ ಕಾಲದಿಂದಲೂ ಇದೆ. ಬುದ್ಧ ಮತ್ತು ಮಹಾವೀರರ ಕಾಲದಲ್ಲಿ ಗಣತಂತ್ರ ಸಮಾಜಗಳಿದ್ದವು. ಜನಪದಗಳಿದ್ದವು. ಜನಪದ ಎನ್ನುವುದು ಸಮುದಾಯ, ಜನಸಮೂಹ, ಜನಸಮುದಾಯಗಳನ್ನೊಳಗೊಂಡ ಆಡಳಿತ ಇತ್ಯಾದಿ ಅರ್ಥಗಳನ್ನು ನೀಡುತ್ತಿದ್ದವು. ಸಂಸ್ಕೃತ ಭಾಷೆಯಲ್ಲಿ ಜನಪದ ಶಬ್ದ ಬಳಕೆಯಲ್ಲಿದೆ. ಜನಪದರು ಎಂದರೆ ಗ್ರಾಮೀಣರು, ಹಳ್ಳಿಗಾಡಿನ ಜನ ಎಂದು ಹೇಳಬಹುದು. ಜನಪದಕ್ಕೆ ಇಂಗ್ಲಿಷ್‌ನಲ್ಲಿ ಫೋಕ್ ಎನ್ನುವ ಶಬ್ದ ಬಳಕೆಯಲ್ಲಿದೆ. ಅದು ಒಂದು ಜನಾಂಗ, ಸಮಾಜದ ಕೆಳಗಿನ ಸ್ಥರ, ಸಂಕೀರ್ಣ ಸ್ವಭಾವದ ನಾಗರಿಕ ಸಮಾಜದಲ್ಲಿ ಹಳೆಯ ಗುಂಪು, ಮೂಲ ಸಂಸ್ಕೃತಿಯನ್ನು ಒಯ್ಯುವ ಸಾಮಾಜಿಕ ವರ್ಗ, ಸಂಪ್ರದಾಯದೊಂದಿಗೆ ಹೆಣೆದ ಸಮಾಜ ಈ ಮೊದಲಾದ ಅರ್ಥವನ್ನು ಕೊಡುತ್ತವೆ. ಇಂಗ್ಲೀಷಿನಲ್ಲಿ ಫೋಕ್ಲೋರ್ ಎಂಬ ಪದವನ್ನು ಸೃಷ್ಟಿಸಿದ ವ್ಯಕ್ತಿಗೆ ಜನಪದ ಜ್ಞಾನದ ಬಗ್ಗೆ ತಿಳಿದಿತ್ತು. ಆದ್ದರಿಂದಲೇ ಲೋರ್ ಎನ್ನುವ ಶಬ್ದವನ್ನು ಹುಡುಕಿ ಫೋಕ್ ಪದಕ್ಕೆ ಸೇರಿಸಿ ಫೋಕ್ಲೋರ್ ಎನ್ನುವ ಪದವನ್ನು ಹುಟ್ಟುಹಾಕಿದನು.

17ನೇ ಶತಮಾನದಿಂದಲೂ ಯೂರೋಪ್ ದೇಶದಲ್ಲಿ ಜಾನಪದ ಎಂಬ ಪದಕ್ಕೆ ಹಲವಾರು ಶಬ್ದಗಳನ್ನು ಗುರುತಿಸಿಕೊಂಡು ಬಂದಿದ್ದಾರೆ. ಇಂಗ್ಲಿಷ್ ಭಾಷೆಯಲ್ಲಿ ಫೋಕ್‌ಲೈಫ್, ಸ್ವೀಡೀಶ್ನಲ್ಲಿ ಫೋಕ್ ಲೈವ್, ಜರ್ಮನ್ನಲ್ಲಿ ಫೋಕ್ಸ್ ಬೆನ್ ಇತ್ಯಾದಿ ಪದಗಳು ಬಳಕೆಯಲ್ಲಿದ್ದವು. ಜಾನ್ ಬ್ರಾಂಡ್ ಎಂಬ ವಿದ್ವಾಂಸ ಓರಲ್ ಟ್ರೆಡಿಷನ್(ಮೌಖಿಕ ಸಂಪ್ರದಾಯ) ಎಂಬ ಪದವನ್ನು ಚಲಾವಣೆಗೆ ತಂದನು. ಜರ್ಮನ್ ಮೂಲದ ವೋಕ್ಸ್‌ಕುಂಡೆ ಎನ್ನುವ ಪದ ರೂಢಿಗೆ ಬಂದಿತು. ಜನಪದ ಸಾಹಿತ್ಯದೊಂದಿಗೆ ಜನಪದ ಬದುಕಿನ ಸಾಂಪ್ರದಾಯಿಕ ಕಲೆ, ಕೈಗಾರಿಕೆ, ಶಿಲ್ಪ, ಸಂಗೀತ ಎಲ್ಲವೂ ಸೇರಿದ್ದವು. ಜನಪದ ಸಂಸ್ಕೃತಿಯ ಅಧ್ಯಯನವು ನಡೆಯುತ್ತಿದ್ದ ಕಾಲದಲ್ಲಿ ಜನಪ್ರಿಯ ಪ್ರಾಚೀನ ಪಳೆಯುಳಿಕೆಗಳು (Popular antiquities) ಹಾಗೂ ಜನಪ್ರಿಯ ಪ್ರಾಚೀನ ಸಾಹಿತ್ಯ ಎಂಬ ಪದಗಳು ವಾಡಿಕೆಯಲ್ಲಿದ್ದವು. ಫೋಕ್‌ಲೈಫ್ ಮತ್ತು ವೋಕ್ಸ್‌ಕುಂಡೆ ಎಂಬ ಪದಗಳು ಸಮಗ್ರ ಜನಪದ ಬದುಕಿನ ಸಮಸ್ತಾಂಶಗಳನ್ನು ಒಳಗೊಳ್ಳುವ ವ್ಯಾಪಕ ಅರ್ಥವನ್ನು ಪಡೆದಿದ್ದವು. ಕ್ರಿ.ಶ. 1803ರಲ್ಲಿ ಲಂಡನ್‌ನ ವಿಲಿಯಂ ಜಾನ್ ಥಾಮ್ಸ್‌ನಿಗೆ ಬ್ರಿಟನ್ ದೇಶದ ಪ್ರಾಚೀನ ವಿದ್ವಾಂಸನಾದ ಥಾಮಸ್ ಅಮ್ಯೂಟ್‌ನ ಜನಪದ ಸಂಶೋಧನೆಯನ್ನು ಕಂಡು ಅದರಿಂದ ಪ್ರೇರೇಪಿತನಾಗಿದ್ದನು. ಅವನು 42ನೇ ವಯಸ್ಸಿಗೆ ಉತ್ತಮ ವಾಗ್ಮಿ ಮತ್ತು ಶ್ರೇಷ್ಠ ಪ್ರಾಚೀನ ಅನ್ವೇಷಕ ಎಂದು ಹೆಸರುವಾಸಿಯಾಗಿದ್ದನು. 1845ರಲ್ಲಿ ಬ್ರಿಟನ್ನಿನ ಹೌಸ್

ಆಫ್ ಲಾರ್ಡ್ ಸಭೆಯ ಗುಮಾಸ್ತನಾಗಿ ಮತ್ತು ಫ್ರಾನ್ಸಿಸ್ ಗ್ರಾಸ್ ಎಂಬ ಸಾಹಿತ್ಯಾಸಕ್ತನ ಜೊತೆ ಸೇರಿ ತನ್ನ 24ನೇ ವಯಸ್ಸಿನಲ್ಲೇ ಅಂದರೆ 1927–28ರ ಅವಧಿಯಲ್ಲಿ ಜನಪದ ಕಥೆಗಳು, ಜನಪದ ಗೀತೆ ಮತ್ತು ಇತರೆ ಸಂಕಲನಗಳನ್ನು ಬಿಡುಗಡೆ ಮಾಡಿದ್ದನು. ಜರ್ಮನಿಯ ವೋಕ್ಸ್‌ಕುಂಡೆ ಮತ್ತು ಇಂಗ್ಲಿಷ್‌ನ ಫೋಕ್ ಲೈಫ್ ಶಬ್ದಗಳು ಅವನ ಮುಂದಿನ ಸಂಶೋಧನೆಗೆ ದಾರಿ ಮಾಡಿಕೊಟ್ಟಿದ್ದವು. ಅಂಬ್ರೋಸ್ ಮೆರ್ಕಾನ್ ಫೋಕ್‌ಲೋರ್ ಎಂಬ ಪದವನ್ನು ಮೊತ್ತ ಮೊದಲ ಬಾರಿಗೆ ತನ್ನ ಸಾಹಿತ್ಯದಲ್ಲಿ ಬಳಸಿದನು. ಅದು ಜಾನಪದವನ್ನು ಗಮನದಲ್ಲಿರಿಸಿಕೊಂಡು ಈ ಪದವನ್ನು ಹುಟ್ಟುಹಾಕಿದನು. ವಿಲಿಯಮ್ ಥಾಮ್ಸ್ ಹುಟ್ಟುಹಾಕಿದ ಪದವನ್ನು ಮುಂದೆ ಐದು ವರ್ಷಗಳ ನಂತರ ವಿಲಿಯಮ್ ಸ್ವನ್‌ಬರ್ಗ್ ಎಂಬ ವಿದ್ವಾಂಸ ತನ್ನ ಕೃತಿಗೆ ಬಳಸಿಕೊಳ್ಳುತ್ತಾನೆ. ಕ್ರಮೇಣ ಫೋಕ್ಲೋರ್ ಶಬ್ದವು ಬೆಳೆದಂತೆ ಜಗತಿನಾದ್ಯಂತ ಮನ್ನಣೆಯನ್ನು ಪಡೆದುಕೊಳ್ಳುತ್ತದೆ.

ಕರ್ನಾಟಕದಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಜನಪದ ಸಂಗ್ರಹಕ್ಕೆ ಸಂಬಂಧಪಟ್ಟಹಾಗೆ ಹಲವಾರು ಸಂಶೋಧನೆಗಳು ನಡೆಯುತ್ತಾ ಬಂದಿರುತ್ತವೆ. ಈ ಎಲ್ಲಾ ಸಂಗ್ರಹಗಳು ಫೋಕ್ಲೋರ್‌ಗೆ ಸಮನಾಗಿ ತನ್ನದೇ ಆದ ಅರ್ಥ ವಿವರಣೆಗಳನ್ನು ಹುಟ್ಟಿಸಿಕೊಂಡಿವೆ. 1931ರಲ್ಲಿ ಪ್ರಕಟವಾದ ಗರತಿಯ ಹಾಡು ಸಂಕಲನಕ್ಕೆ ಮುನ್ನುಡಿ ಬರೆದ ಬಿಎಂಶ್ರೀ ಮತ್ತು ಬೇಂದ್ರೆಯವರು ಫೋಕ್ ಲಿಟರೇಚರ್‌ಗೆ ಸಮನಾಗಿ ಹಳ್ಳಿಯ ಹಾಡು ಎಂಬ ಪದವನ್ನು ಬಳಸಿದ್ದರು. ಜನಪದ ಕ್ಷೇತ್ರದಲ್ಲಿ ಪ್ರಪ್ರಥಮವಾಗಿ ಪಿಹೆಚ್‌ಡಿ ಪದವೀಧರರೆಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಡಾ.ಬಿ.ಎಸ್. ಗದಗೀಮಠ ಅವರು ತಮ್ಮ ಕನ್ನಡ ಜಾನಪದ ಗೀತೆಗಳು ಎಂದು ಮಹಾ ಪ್ರಬಂಧದಲ್ಲಿರುವ ಫೋಕ್ಲೋರ್‌ಗೆ ಸರಿಸಮಾನವಾಗಿ ಜಾನಪದ ಸಾಹಿತ್ಯ ಎಂಬ ಪದವನ್ನು ಪ್ರಯೋಗ ಮಾಡಿದರು. ದೇವುಡು ನರಸಿಂಹ ಶಾಸ್ತ್ರಿಗಳು ತಮ್ಮ ಕರ್ನಾಟಕ ಸಂಸ್ಕೃತಿ ಕೃತಿಯಲ್ಲಿ ಜನತೆಯ ಸಂಸ್ಕೃತಿಗೆ ಸಂವಾದಿಯಾಗಿ ಇಂಗ್ಲಿಷ್‌ನಲ್ಲಿ ಫೋಕ್‌ಲೋರ್ ಎಂದೂ, ಜರ್ಮನ್ ಭಾಷೆಯಲ್ಲಿ ಕಲ್ಚರ್ ಎಂದೂ ಕರೆಯುತ್ತಾರೆ ಎಂದು ಉಲ್ಲೇಖಿಸಿದ್ದಾರೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಜಾನಪದ ಪರಿಭಾಷೆಯ ಚರ್ಚೆಗಳು ಹೀಗೆಯೇ ಮುಂದುವರಿದು ಫೋಕ್ ಸಾಂಗ್ ಎನ್ನುವುದಕ್ಕೆ ಜಾನಪದ ಗೀತೆ, ಹಳ್ಳಿಯ ಹಾಡು, ಜನತಾಗೀತೆ, ನಾಡಪದ, ಲೋಕಗೀತೆ ಇತ್ಯಾದಿ ಹೆಸರುಗಳು ಬಂದವು. ಹಾಗೂ ಹಲವಾರು ಜಾನಪದ ತಜ್ಞರ ಅಭಿಪ್ರಾಯದಂತೆ ಜಾನಪದ ವಿಜ್ಞಾನ, ಜಾನಪದ ಶಾಸ್ತ್ರ, ಮಾನವಪದ ಶಾಸ್ತ್ರ ಹೀಗೆ ಇತ್ಯಾದಿ ಪದಗಳು ಹುಟ್ಟಿಕೊಂಡವು. ಅದರೊಂದಿಗೆ ಲೋಕವ್ರತ, ಲೋಕವಿಜ್ಞಾನ, ಲೋಕಸಂಸ್ಕೃತಿ, ಲೋಕಾಯನ, ಗ್ರಾಮಸಾಹಿತ್ಯ, ಲೋಕಗೀತ, ಪಲ್ಲಿಗೀತ್, ಲೋಕವಾಙ್ಮಯ, ಲೋಕವಾರ್ತಾ ಇತ್ಯಾದಿ ಪದಗಳು ರೂಢಿಗೆ ಬಂದವು.

ಅಮೇರಿಕಾದಲ್ಲಿ ಫೋಕ್ಲೋರಿಸ್ಟಿಕ್ ಎಂಬ ವಿಸ್ತಾರ ರೂಪವನ್ನು ಪಡೆಯಿತಾದರೂ 1949ರಲ್ಲಿ ಮರಿಯಾ ಲೀಚ್ ಅವರು ಸಂಪಾದಿಸಿರುವ 'ಸ್ಟ್ಯಾಂಡರ್ಡ್ ಡಿಕ್ಷ್ನರಿ ಆಫ್ ಫೋಕ್ಲೋರ್, ಮೈಥಾಲಜಿ

ಅಂಡ್ ಲೆಜೆಂಡ್' ಎಂಬ ಕೃತಿಯಲ್ಲಿ ಜಗತ್ತಿನ ನಾನಾ ಭಾಗಗಳ 21 ಮಂದಿ ವಿದ್ವಾಂಸರು ಜಾನಪದದ ವ್ಯಾಪ್ತಿ, ಸ್ವರೂಪ, ಮಹತ್ವಗಳನ್ನು ವಿವಿಧ ವಾಖ್ಯೆಗಳಲ್ಲಿ ಹಿಡಿದಿಡುವ ಪ್ರಯತ್ನ ಮಾಡುತ್ತಿರುತ್ತಾರೆ. ಬಹಳ ಮುಖ್ಯವಾದ ಕೆಲವು ವಿದ್ವಾಂಸರುಗಳೆಂದರೆ, ಅಮೇರಿಕಾದ ಮಾನವ ಶಾಸ್ತ್ರಜ್ಞ ವಿಲಿಯಂ ಆರ್. ಭಾಸ್ಕಂ, ಜಾರ್ಜ್ ಎಂ. ಫಾಸ್ಟರ್, ಜನಪದ ಸಂಗೀತ ಮತ್ತು ಜಾನಪದ ತಜ್ಞ ಜಾರ್ಜ್ ಹೆರ್ಝಾಗ್, ಡಬ್ಲೂ ವೋಯ್ಸಗಲಿನ್, ಪುರಾತನ ಇತಿಹಾಸದ ಸಂಶೋಧಕರಾದ ಜಾನ್ ಎಲ್. ಮಿಶ್, ಜಾನಪದ ಪ್ರಾಧ್ಯಾಪಕರಾದ ಥಿಯೋಡಾರ್ ಹೆಚ್. ಗಾಸ್ಟರ್, ಧರ್ಮಶಾಸ್ತ್ರ ಪ್ರಾಧ್ಯಾಪಕರಾದ ಚಾರ್ಲಸ್ ಫ್ರಾನ್ಸಿಸ್ ವಾಟರ್, ಲಿಥುವೇನಿಯಾದ ಜಾನಪದ ವಿದ್ವಾಂಸರಾದ ಜೋನಸ್ ಬ್ಯಾಲಿಸ್, ಎಡ್ವಿನ್ ಸಿಡ್ನಿ ಹಾರ್ಟ್‌ಲ್ಯಾಂಡ್, ಬಿ.ಎ. ಬಾಟ್ಕಿನ್, ಅಮೇರಿಕಾ ಮತ್ತು ಸ್ಪೇನ್ ದೇಶದ ಔರೇಲಿಯೋ ಎಂ. ಎಸ್ಪಿನೋಸ್, ಕೆನೆತ್ ಮತ್ತು ಮೇರಿ ಕ್ಲಾರ್ಕ್, ರಿಚರ್ಡ್ ಎಂ. ಡಾರ್ಸನ್ ಇನ್ನು ಮುಂತಾದವರು ಜಾನಪದದ ಬೆಳವಣಿಗೆಯನ್ನು ಹಲವಾರು ರೀತಿಯಲ್ಲಿ ಖಚಿತವಾಗಿ ವ್ಯಾಖ್ಯಾನಿಸಿದ್ದಾರೆ. ಕನ್ನಡದ ಜಾನಪದ ವಿದ್ವಾಂಸರಾದ ಬಿ.ಎಂ. ಶ್ರೀಕಂಠಯ್ಯ, ವರಕವಿ ದ.ರಾ. ಬೇಂದ್ರೆ, ದೇವುಡು ನರಸಿಂಹ ಶಾಸ್ತ್ರಿ, ದೇ.ಜ.ಗೌ., ಜಿ.ಶಂ. ಪರಮಶಿವಯ್ಯ, ಹಾ.ಮಾ. ನಾಯಕ್, ಡಾ. ಜಿ.ಎಸ್. ಗದಗೀಮಠ, ಡಾ. ಡಿ.ಕೆ. ರಾಜೇಂದ್ರ, ಡಾ. ಅಂಬಳಿಕೆ ಹಿರಿಯಣ್ಣ, ಸಿ.ಪಿ. ಕೃಷ್ಣಕುಮಾರ್, ಹೆಚ್. ಎಲ್. ನಾಗೇಗೌಡ, ಹಿ.ಶಿ. ರಾಮಚಂದ್ರೇಗೌಡ, ಹಿ.ಚಿ. ಬೋರಲಿಂಗಯ್ಯ, ಡಾ. ಚಕ್ಕೆರೆ ಶಿವಶಂಕರ್, ವ.ನಂ. ಶಿವರಾಂ ಇನ್ನು ಮುಂತಾದವರು ಹಲವಾರು ರೀತಿಯಲ್ಲಿ ಜಾನಪದದ ಬಗ್ಗೆ ವ್ಯಾಖ್ಯಾನಿಸಿದ್ದನ್ನು ಕಾಣಬಹುದಾಗಿದೆ.

ಭಾರತ ದೇಶದಲ್ಲೇ ನಮ್ಮ ಕರ್ನಾಟಕದ ಜಾನಪದ ಸಂಸ್ಕೃತಿ ಅತ್ಯಂತ ಶ್ರೀಮಂತವಾಗಿದೆ. ಕಲೆ, ಸಾಹಿತ್ಯ, ನೃತ್ಯ (ಡೊಳ್ಳು ಕರಪಾಲ ಮೇಳ, ಕಂಸಾಳೆ ಮೇಳ, ಕಿನ್ನರಿ ಜೋಗಿ ಮೇಳ, ಗೀಗೀ ಮೇಳ, ಗೊರವರ ಮೇಳ, ಚೌಡಿಕೆ ಮೇಳ, ತಂಬೂರಿ ಮೇಳ, ದೊಂಬಿದಾಸರ ಮೇಳ, ನೀಲಗಾರ ಮೇಳ, ಬುರ್ರಕಥಾ ಮೇಳ, ಹೆಳವರ ಮೇಳ, ಲಂಬಾಣಿ ಕುಣಿತ, ಚಿಟ್ ಮೇಳ, ಗೊಂದಲಿಗರ ಮೇಳ, ಜೋಗತಿ ಕುಣಿತ, ಕೋಲಾಟ, ಕರಗ, ಹೆಜ್ಜೆ ಮೇಳ, ಕಂಗಿಲು ಕುಣಿತ, ಆಟಿಕಳೆಂಜ, ಕೊರಗರ ಕುಣಿತ, ಕರಂಗೋಲು ಕುಣಿತ, ಕರಡಿ ಮಜಲು, ವೀರಗಾಸೆ, ನಂದಿಕೋಲು ಕುಣಿತ ಇತ್ಯಾದಿ), ನಾಟಕ (ಬಯಲಾಟ, ತಾಳಮದ್ದಳೆ, ತೊಗಲು ಗೊಂಬೆಯಾಟ, ಸಣ್ಣಾಟ, ದೊಡ್ಡಾಟ, ಶ್ರೀ ಕೃಷ್ಣಪಾರಿಜಾತ, ಯಕ್ಷಗಾನ) ಮುಂತಾದ ವಿವಿಧ ಪ್ರಕಾರಗಳನ್ನು ನಮ್ಮ ಕನ್ನಡ ಜಾನಪದ ಸಂಸ್ಕೃತಿಯಲ್ಲಿ ಕಾಣಬಹುದು. ಕನ್ನಡ ಜಾನಪದ ಸಂಸ್ಕೃತಿಯ ಒಂದು ಭಾಗವಾದ ಜನಪದ ಗೀತೆಗಳು ಅತ್ಯಂತ ವೈವಿಧ್ಯಮಯವಾಗಿ ಕನ್ನಡ ನಾಡಿನ ವಿವಿಧ ಪ್ರದೇಶಗಳ ಸೊಗಡುಗಳನ್ನು ನಮ್ಮ ಮುಂದಿನ ಪೀಳಿಗೆಗೆ ಜೋಪಾನ ಮಾಡಿವೆ ಎಂದರೆ ತಪ್ಪಿಲ್ಲ. ಇಂದಿನ ಪಾಶ್ಚಾತ್ಯ ಶೈಲಿಯ ಸಂಗೀತದ ಮಧ್ಯೆ ಜನಪದ ಗೀತೆಗಳು ತನ್ನ ಹಿಂದಿನ ವೈಭವವನ್ನು ಸ್ವಲ್ಪ ಮಟ್ಟಿಗೆ ಕಳೆದುಕೊಂಡಿವೆ. ತನ್ನ ಮೂಲ ನೆಲೆಯಾದ ಹಳ್ಳಿಗಳಲ್ಲಿ ಇನ್ನೂ ತನ್ನ

ನೆಲೆಯನ್ನು ಭದ್ರವಾಗಿ ಉಳಿಸಿಕೊಂಡಿರುವುದು ಸಮಾಧಾನ ತರುವ ಸಂಗತಿಯಾಗಿದೆ. ಕಂಸಾಳೆ ಪದ, ಗೀಗೀಪದ, ಕೋಲಾಟದ ಪದ, ರಾಗಿ ಬೀಸೋ ಪದ, ಸುಗ್ಗಿ ಹಾಡುಗಳು, ಹೀಗೆ ಇನ್ನೂ ಅನೇಕ ವಿವಿಧ ಬಗೆಯ ಜನಪದ ಗೀತೆಗಳು ಆಯಾ ಪ್ರದೇಶದ ಜನರ ದೈನಂದಿನ ಚಟುವಟಿಕೆಗಳನ್ನು, ಕೌಟುಂಬಿಕ ಜೀವನವನ್ನು, ಸಂಬಂಧಗಳನ್ನು, ದೇವರುಗಳನ್ನು ಹಾಗೂ ಧಾರ್ಮಿಕ ಆಚರಣೆಗಳನ್ನು ನಮ್ಮ ಮುಂದೆ ತೆರೆದಿಡುತ್ತವೆ.

ಈ ಜನಪದ ಗೀತೆಗಳನ್ನು ಸೃಷ್ಟಿಸಿದವರು ಯಾರೆಂದು ಹೇಳುವುದು ಕಷ್ಟವಾಗುತ್ತದೆ. ಹಳ್ಳಿಯ ಸಾಮಾನ್ಯ ಜನರ ನಡುವೆ ಹುಟ್ಟಿ ಬಾಯಿಂದ ಬಾಯಿಗೆ ಹರಿದು ಬಂದಿರುವ ಸಿರಿನುಡಿ ಎನ್ನಬಹುದು. ಇವು ನೂರಾರು ವರ್ಷಗಳಿಂದ ಸಾವಿರಾರು ಜನರ ಬಾಯಿಂದ ಹರಿದು ಬಂದ ನುಡಿಗಳು. ನಮ್ಮ ಹಳ್ಳಿಗಳಲ್ಲಿ ಸಂಸ್ಕೃತಿಯ ತತ್ವವನ್ನು, ಕ್ರಿಯಾಶೀಲತೆಯನ್ನು, ಕಲೆಯನ್ನು ಮತ್ತು ಮಾಧುರ್ಯವನ್ನು ಮುಂದಿನ ಜನಾಂಗಕ್ಕೆ ಪರಿಚಯಿಸುವ ಸಲುವಾಗಿ ಹುಟ್ಟಿಕೊಂಡಂತಹ ಸಂಸ್ಕೃತಿಯೊಂದರ ಹೆಜ್ಜೆ ಗುರುತುಗಳು. ಪ್ರಾಯಶಃ ಸಹಸ್ರಾರು ವರ್ಷದ ಹಿಂದೆ ಜಗತ್ತಿನಲ್ಲೆಲ್ಲಾ ಇದ್ದದ್ದು ಜಾನಪದ ಒಂದೇ. ಮಾನವನು ತಾನು ಮಾಡುವ ಕೆಲಸಗಳನ್ನೆಲ್ಲ ಕಲೆಗಳ ಮೂಲಕ ತನ್ನ ತನ್ಮಯತೆಯನ್ನು ತುಂಬಲು ಮಾಡಿದ ಪ್ರಯತ್ನಗಳ ಸರಮಾಲೆಯೇ ಜಾನಪದವಾಗಿರಬಹುದು. ತನ್ನ ಸುತ್ತಲಿನ ಪರಿಸ್ಥಿತಿಗೆ ತಕ್ಕಂತೆ ತಂತ್ರಜ್ಞಾನಗಳನ್ನು ಆರೋಗ್ಯ ರಕ್ಷಣೆಗೆ ವೈದ್ಯಕೀಯವನ್ನು, ಪ್ರಕೃತಿಯ ಬಿರುಸಿಗೆ ಉತ್ತರವಾಗಿ ಭಕ್ತಿಯನ್ನು ಬೆಳೆಸಿಕೊಂಡಿರಬಹುದು. ಜನಪದ ಮತ್ತು ಜಾನಪದ ಎಂಬ ಶಬ್ದಗಳು ಒಂದು ಸಾಮಾಜಿಕ ವ್ಯವಸ್ಥೆಯನ್ನು ಸೂಚಿಸುತ್ತವೆ. ಪ್ರತಿಯೊಂದು ಸಮಾಜವೂ ತನ್ನ ಪುರಾತನರ ಸಾರವನ್ನು ಹೀರಿ ತನ್ನ ಸದ್ಯದ ಬದುಕಿಗೊಂದು ಅರ್ಥವನ್ನೂ, ತನ್ನ ಸದ್ಯದ ಸಮಸ್ಯೆಗಳಿಗೊಂದು ಪರಿಹಾರವನ್ನೂ, ತನ್ನ ಭಕ್ತಿಗೊಂದು ರೂಪವನ್ನೂ ಕಲೆ, ಶೈಕ್ಷಣಿಕ ಇತ್ಯಾದಿಗಳ ಬೆಳವಣಿಗೆಯನ್ನು ಸಾಂಪ್ರದಾಯಿಕವಾಗಿ ನಿರ್ವಹಿಸುತ್ತದೆ. ಇದು ಯಾವುದೇ ಅಧಿಕಾರದ, ಸಂಪ್ರದಾಯದ ಘೋಷಣೆಯಿಲ್ಲದೆ ತನ್ನಿಂದ ತಾನೇ ಹರಿದುಬಂದು ಮಣ್ಣಿನ ಸಂಸ್ಕೃತಿಯ ಸಾರವಾಗಿ ಜಾನಪದ ಎನಿಸಿಕೊಂಡಿದೆ.

ಜನಪದ ಸಂಗೀತ ಶೈಲಿಯಲ್ಲಿ ಹಲವಾರು ಪ್ರಕಾರಗಳಿವೆ. ಅವುಗಳೆಂದರೆ ಸುಗ್ಗಿಪದ, ಗೀಗೀಪದ, ಕಂಸಾಳೆಪದ, ರಾಗಿಬೀಸುವ ಪದ, ಕೋಲಾಟದ ಪದ, ಲಾವಣಿಪದ, ಸುವ್ವಿಪದ, ಕಾಡುಜನರ ಪದ, ಬಂಡಿಪದ, ಕೊಡಗರ ಬೊಳಕಾಟದ ಪದ, ಸೋಲಿಗರ ಪದ, ಹಂತಿಪದ, ಹಚ್ಚೆಯಪದ, ಕುಟ್ಟುವಪದ, ತಿಂಗಳು ಮಾವನ ಪದ, ಎಣ್ಣೆ ಒತ್ತುವ ಪದ, ಮಾರಿ ಪದ, ಬೇಟೆ ಪದ, ಮಕ್ಕಳ ಪದ, ದಾಸರ ಪದ, ತತ್ವಪದ, ದೊಡ್ಡಾಟ ಪದ, ಯಕ್ಷಗಾನ ಪದ, ಬಯಲಾಟದ ಪದ, ಭೂತನ ಪದ, ಜೋಗುಳ ಪದ ಇತ್ಯಾದಿಗಳಿವೆ. ಅವುಗಳಲ್ಲಿ ಕೆಲವುಗಳನ್ನು ಇಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಜನಪದ ಗೀತೆಗಳು :–

ಸುಗ್ಗಿ ಪದ :–

ಸುಗ್ಗಿಪದವು ಕರ್ನಾಟಕದ ಬಹುತೇಕ ಎಲ್ಲಾ ಭಾಗಗಳಲ್ಲಿ ಹಾಡುವ ಒಂದು ಪದ. ಬಯಲು ನಾಡಿನ ಅನೇಕ ಗ್ರಾಮಗಳಲ್ಲಿ, ಜಾತ್ರೆಗಳಲ್ಲಿ ಸುಗ್ಗಿ ಸಂಭ್ರಮದ ಜೊತೆಗೆ ಇದು ಹುಟ್ಟಿಕೊಂಡಿದೆ. ಹಬ್ಬ ಜಾತ್ರೆಗಳ ಹಿನ್ನೆಲೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಒಕ್ಕಲಿಗರ ಸುಗ್ಗಿಪದವನ್ನು ನಾವು ಕಾಣಬಹುದು. ಪದಗಾರರು ಸೀರೆ ಮೊಣಕಾಲಿನವರೆಗೆ ಬರುವಂತೆ ನೆರಿಗೆಯಾಗಿ ಉಟ್ಟು ಇಲ್ಲವೇ ಪೈಜಾಮಾ ತೊಟ್ಟು ಕೆಂಪು, ಹಳದಿ ಬಣ್ಣದ ನಿಲುವಂಗಿ ಹಾಕಿ ಮೇಲೆ ಜಾಕೀಟು ಧರಿಸಿ, ಸೊಂಟಕ್ಕೆ ತುಂಡು ವಸ್ತ್ರಗಳನ್ನು ಕಟ್ಟಿಕೊಳ್ಳುತ್ತಾರೆ. ತಲೆಗೆ ರುಮಾಲು ಸುತ್ತಿ ತುರಾಯಿಯನ್ನು ಕಟ್ಟಿಕೊಳ್ಳುತ್ತಾರೆ. ತುರಾಯಿಯ ಕೆಳಗೆ ಹಣೆಯ ಮೇಲೆ ಕನ್ನಡಿಯ ಚೂರುಗಳನ್ನು ಒಪ್ಪವಾಗಿ ಕೂಡಿಸಿ ಕಮಾನಿನಾಕಾರದ ಮುಂಗಟ್ಟು ಕಟ್ಟಿಕೊಂಡು ಮುತ್ತಿನ ಸರಗಳನ್ನು ಇಳಿ ಬಿಡುತ್ತಾರೆ. ಸುಗ್ಗಿ ಕಾಲದಲ್ಲಿ ಇದನ್ನು ಹೆಚ್ಚಾಗಿ ಹಾಡುತ್ತಾರೆ.

ಕಂಸಾಳೆ ಪದ :–

ಕಂಸಾಳೆ ಪದವು ಮಲೈ ಮಹಾದೇಶ್ವರನ ಭಕ್ತರಾದ ದೇವರಗುಡ್ಡರು ಹಾಡುವಂತಹ ಹಾಡುಗಳು. ಇವರು ಬಳಸುವಂತಹ ವಿಶಿಷ್ಟ ಬಗೆಯ ವಾದ್ಯ ಎಂದರೆ ಕಂಸಾಳೆ. ಕಂಸಾಳೆ ಪದದ ಕಲಾವಿದರಲ್ಲಿ ಮಾದೇಶ್ವರನ ಹುಟ್ಟು, ಬಾಲ್ಯ, ಬಾಲಲೀಲೆ, ಯೌವನ, ವಿನೋದ, ವಿರಸ, ಮುಪ್ಪು ಮಹಿಮೆಗಳನ್ನು ಹಾಡುತ್ತಾರೆ. ಈ ಕಾವ್ಯವನ್ನು ಇಡೀ ರಾತ್ರಿ ಸರಾಗವಾಗಿ ಹಾಡುತ್ತಾರೆ. ಅವರ ಕಲೆಗಾರಿಕೆಯನ್ನು ನಾವೆಲ್ಲರೂ ಮೆಚ್ಚುವಂತದ್ದು. ಇದರ ಜೊತೆಗೆ ಚೆನ್ನಿಗರಾಮ, ಗಣಪತಿರಾಯ, ಬಾಲನಾಗಮ್ಮ, ಅರ್ಜುನಜೋಗಿ ಮುಂತಾದ ಕಥಾಪ್ರಸಂಗಗಳನ್ನು ಹಾಡುತ್ತಾರೆ. ಇದು ಜನಪದ ಕ್ಷೇತ್ರದ ಬಹುದೊಡ್ಡ ನಿಧಿಗಳಲ್ಲೊಂದಾಗಿದೆ. ಕಂಸಾಳೆ ಮೇಳದಲ್ಲಿ ೪ರಿಂದ ೧೨ ಜನರು ಭಾಗವಹಿಸುತ್ತಾರೆ. ಹಾಡುವ ಸಂದರ್ಭದಲ್ಲಿ ನಾಲ್ವರು, ನೃತ್ಯ ಮಾಡುವ ಸಂದರ್ಭದಲ್ಲಿ ೮ರಿಂದ ೧೨ ಜನ ಕಲಾವಿದರಿರುತ್ತಾರೆ. ಇವರಿಗೆ ಮೇಳದ ಸಮಯದಲ್ಲಿ ಇಂತಹದ್ದೇ ವೇಷಭೂಷಣಗಳು ಇರಬೇಕೆಂಬ ನಿಯಮವೇನಿಲ್ಲ. ನಿತ್ಯದ ಅಂಗಿ, ಪಂಚೆ, ಹೆಗಲಿಗೆ ಜೋಳಿಗೆ, ಕೊರಳಿಗೆ ರುದ್ರಾಕ್ಷಿ, ಹಣೆಗೆ ವಿಭೂತಿ, ಕೈಯಲ್ಲಿ ಕಂಸಾಳೆ ಹಿಡಿದು ಈ ಕಲಾವಿದರಲ್ಲಿ ಒಬ್ಬ ಕಂಜರವನ್ನು ನುಡಿಸುತ್ತಾನೆ. ಹಿಮ್ಮೇಳದವರು ಹಾಡಿನ ಲಯಕ್ಕೆ ಅನುಗುಣವಾಗಿ ತಾಳದ ನುಡಿತವು ಉಂಟಾಗುತ್ತದೆ. ಪ್ರಧಾನ ಹಾಡುಗಾರನು ಮಧ್ಯದಲ್ಲಿದ್ದು ಸಹಕಲಾವಿದರು ಡಪ್ಪು, ಕಂಸಾಳೆ, ಚಿಟಿಕೆ ಹಿಡಿದು ಸುತ್ತಲೂ ಕುಣಿಯುತ್ತಾರೆ. ವಾದ್ಯಕ್ಕೆ ಅನುಗುಣವಾಗಿ ಹಾಡುತ್ತಾ ಧ್ವನಿಗೂಡಿಸುತ್ತಾರೆ. ಕಥೆಯ ಸಂಭಾಷಣೆಗೆ ತಕ್ಕಂತೆ ನಡೆಯುವಾಗ

ಉಳಿದವರು 'ಹೌದಪ್ಪ ಹೌದು' ಎಂದು ಹೇಳುವರು. ಇದು ಮೈಸೂರು ಭಾಗದ ಒಂದು ಜನಪದ ಸಂಗೀತವಾಗಿದ್ದು ಈಗ ಚಾಮರಾಜ ನಗರ ಜಿಲ್ಲೆಯದ್ದಾಗಿದೆ.

ರಾಗಿ ಬೀಸುವ ಪದ :–

ಇದು ಕರ್ನಾಟಕದ ಜನಪದ ಗೀತೆ ಪ್ರಕಾರಗಳಲ್ಲೊಂದು. ಇದನ್ನು ಮಹಿಳೆಯರು ರಾಗಿ ಬೀಸುವಾಗ ಹಾಡುವ ಪದ ಎಂದು ಕರೆಯಲಾಗಿದೆ. ರಾಗಿ ಬೀಸುವ ಪದ ಹಳ್ಳಿಗಳಲ್ಲಿ ಉಪಯೋಗದಲ್ಲಿದ್ದು, ಇಲ್ಲಿ ಎರಡು ವೃತ್ತಾಕಾರದ ಕಲ್ಲುಗಳಿರುತ್ತದೆ. ಮೇಲಿನ ಕಲ್ಲಿನಲ್ಲಿ ಮಧ್ಯ ಭಾಗವನ್ನು ವೃತ್ತಾಕಾರದಲ್ಲಿ ಕೊರೆದಿರುತ್ತಾರೆ. ವೃತ್ತಾಕಾರದ ಕಲ್ಲಿನ ಕೊನೆಯ ಭಾಗದಲ್ಲಿ ಒಂದು ಗೂಟವಿರುತ್ತದೆ. ಕೆಳಗಿನ ಕಲ್ಲಿನ ಮಧ್ಯ ಒಂದು ಕಬ್ಬಿಣದ ಚಿಕ್ಕ ಮೊಳೆ ಇರುತ್ತದೆ. ಇದರ ಮೇಲೆ ವೃತ್ತಾಕಾರದ ಮೇಲಿನ ಕಲ್ಲು ಅದರ ಮೇಲೆ ಸರಿಯಾಗಿ ಕುಳಿತುಕೊಳ್ಳುತ್ತದೆ. ರಾಗಿ ಕಲ್ಲಿನಲ್ಲಿ ಬೀಸಲು ಇಬ್ಬರು ಇರುತ್ತಾರೆ. ಬಹಳ ಸುಲಭವಾಗಿ ಬೀಸಲು ಸಹಾಯವಾಗುತ್ತದೆ. ಒಬ್ಬರೂ ಸಹ ಬೀಸಬಹುದು. ರಾಗಿಯನ್ನು ಬೀಸುವಾಗ ಪದಗಳನ್ನು ಹಾಡುತ್ತಾರೆ, ಬೆಳಗಾಗಿ ನಾನೆದ್ದು ಯಾರ್‍ಯಾರ ನೆನೆಯಾಲಿ, ಎನ್ನುವ ಅತಿ ಸೊಗಸಾದ ರಾಗಿ ಬೀಸುವ ಹಾಡು ಕೇಳದವರ್‍ಯಾರು. ಮಕ್ಕಳನ್ನು ಕೂರಿಸಿಕೊಂಡು ಅವರಿಗೂ ರಾಗಿ ಬೀಸುವ ಪದವನ್ನು ಹೇಳಿಕೊಡುತ್ತಾರೆ. ಈಗಲೂ ಸಹ ರಾಗಿ ಬೀಸುವಾಗ ಹಾಡುವುದರಿಂದ ಬೀಸುವವರಿಗೆ ಆಯಾಸ ಇರುವುದಿಲ್ಲ. ರಾಗಿ ಮಾತ್ರವಲ್ಲದೆ ಚಟ್ನಿ ಪುಡಿ, ಕಾಫಿ ಪುಡಿ, ಮೆಂತ್ಯ ಹಿಟ್ಟು, ಗೋಧಿ ಹಿಟ್ಟು, ಅಕ್ಕಿ ಹಿಟ್ಟು ಮುಂತಾದವುಗಳನ್ನು ಪದ ಹೇಳುತ್ತಾ ಬೀಸುತ್ತಾರೆ.

ಕೋಲಾಟ ಪದ :–

ಕೋಲಾಟದ ಪದವು ಕರ್ನಾಟಕ ರಾಜ್ಯಕ್ಕೆ ಸೇರಿದ ಜನಪ್ರಿಯ ಜನಪದ ಕಲೆಯಾಗಿದೆ. ಕೋಲಾಟವು ಒಂದು ಗಂಡು ಕಲೆಯಾಗಿದೆ. ಹೆಣ್ಣು ಮಕ್ಕಳು ಸಹ ಕೋಲಾಟ ಆಡುತ್ತಾರೆ. ಇದರಲ್ಲಿ ಹಾಡು ಮತ್ತು ಕುಣಿತವು ಬೆರೆತಿರುವಂತಹ ಗೋಕುಲದಲ್ಲಿ ಶ್ರೀಕೃಷ್ಣನ ಜನನವಾದಾಗ ಯಾದವರು ಕೋಲಾಡುವ ಮೂಲಕ ತಮ್ಮ ಸಂತೋಷವನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ಗೋಪಿಕಾ ಸ್ತ್ರೀಯರು ಶ್ರೀಕೃಷ್ಣನೊಂದಿಗೆ ಬಣ್ಣದ ಕೋಲುಗಳಿಂದ ಆಟವಾಡಿರುವುದು, ಕೋಲಾಟದ ಪ್ರಾಚೀನ ಇತಿಹಾಸವನ್ನು ತಿಳಿಸುತ್ತದೆ. ಕೋಲಾಟದಲ್ಲಿ ಕೋಲು ಪದಗಳಿಗೆ ಹೆಚ್ಚು ಪ್ರಾಮುಖ್ಯತೆ ಇದೆ. ಇವು ಪ್ರಾಸ, ಚರಣ, ಪಲ್ಲವಿಗಳಿಂದ ವಿನೋದ, ದುರಂತ, ಪ್ರಣಯ ಮುಂತಾದ ವಸ್ತುಗಳನ್ನೊಳಗೊಂಡ ಕೋಲುಪದಗಳು ಕೋಲಾಟದ ಅವಿಭಾಜ್ಯ ಅಂಗ ಎಂದೇ ಹೇಳಬಹುದು. ಕೋಲಾಟದ ವೇಷವೆಂದರೆ ಚಡ್ಡಿ ಅಥವಾ ಮೊಣಕಾಲಿನವರೆಗೆ ಎತ್ತಿ ಕಟ್ಟಿದ ಪಂಚೆ, ಒಳ ಅಂಗಿ, ಸೊಂಟಕ್ಕೆ ಒಂದು ವಸ್ತು ಮತ್ತು ಕಾಲಿಗೆ ಗೆಜ್ಜೆ. ಕೊಡವ, ಗೊಲ್ಲ ಮತ್ತು ಲಂಬಾಣಿ ಜನಾಂಗಗಳಲ್ಲಿ ಕೋಲಾಟವು ಹೆಚ್ಚು ಪ್ರಯೋಗಗೊಳ್ಳುತ್ತದೆ. ಅಲ್ಲಿನ ಹೆಂಗಸರು ಕೋಲಾಟವಾಡುವುದುಂಟು. ಆಶ್ವಯುಜ ಮಾಸದಲ್ಲಿ

ಹುಣ್ಣಿಮೆಯಂದು ಶಾಸ್ತ್ರೋಕ್ತವಾಗಿ ಕಾಡಿಗೆ ಹೋಗಿ ಅಲ್ಲಿ ಗಂಧ, ಕೊಡಸು, ಬೈನೆ, ಹೊನ್ನೆ ಮರಗಳಲ್ಲಿ ಮಾತ್ರ ಕೋಲುಗಳನ್ನು ಕಡಿದು ತರುತ್ತಾರೆ. ಗಣೇಶನ ಪ್ರಾರ್ಥನೆಯೊಡನೆ ಕೋಲಾಟ ಪ್ರಾರಂಭವಾಗುವುದು. ಮೊದಲಿಗೆ ಕಲಾವಿದರು ವರ್ತುಲಾಕಾರದಲ್ಲಿ ನಿಲ್ಲುವರು, ಮಧ್ಯೆ ಕೋಲುಗಳನ್ನಿಟ್ಟು ಪೂಜಿಸಿ ತಮ್ಮ ಮುಖಂಡನಿಗೆ ವಂದನೆ ಮಾಡಿದ ಬಳಿಕ ಗಣಪತಿ, ಇಷ್ಟದೈವ, ಗ್ರಾಮದೇವತೆ, ಪ್ರಕೃತಿ, ಶರಣ, ವೀರ, ಮುಂತಾದ ಸ್ತುತಿ ಮಾಡುವರು. ಅನಂತರ ಕೋಲಾಟ ಪ್ರಾರಂಭವಾಗುತ್ತದೆ. ಮಧ್ಯೆಮಧ್ಯೆ ಹೈ, ಥೈ, ಥೈಯ್ಯ, ಉಡುದೈಯ್ಯ ಎಂದು ಒಂದಿಬ್ಬರು ಕೂಗುವುದುಂಟು. ಆಟದ ಮುಕ್ತಾಯದಲ್ಲಿ ಥೈಯ್ಯ, ಥೈಯ್ಯ, ಥಗಡದಥೈಯ್ಯ ಎಂದು ಹೇಳಿ ಮುಗಿಸುವ ಸಂಪ್ರದಾಯ ಉಂಟು.

ಸೋಬಾನೆ ಪದ :–

ಜನಪದ ಸಾಹಿತ್ಯದಲ್ಲಿ ಸೋಬಾನೆ ಪದಕ್ಕೆ ವಿಶಿಷ್ಟ ಸ್ಥಾನವಿದೆ. ಗಂಡು ಮಕ್ಕಳಿಗಾಗಲಿ, ಹೆಣ್ಣು ಮಕ್ಕಳಿಗಾಗಲಿ ಮದುವೆ ಮಾಡುವ ಸಂದರ್ಭದಲ್ಲಿ ಹಾಡೋ ಪದಗಳೇ ಸೋಬಾನೆ ಪದಗಳಾಗಿರುತ್ತವೆ. ಗಂಡು ಅಥವಾ ಹೆಣ್ಣು ಮದುವೆಯಾಗಲು ಒಪ್ಪಿಗೆಯಾಗಿ ಶಾಸ್ತ್ರಗಳನ್ನು ಶುರು ಮಾಡಿದ ದಿನದಿಂದ ಹಿಡಿದು ಮದುವೆ ಕಾರ್ಯ ಮುಗಿಯುವವರೆಗೂ ಹಾಡುವ ಪದಗಳೇ ಸೋಬಾನೆ ಪದಗಳು. ತವರು ಮನೆಯಿಂದ ಗಂಡನ ಮನೆಗೆ ಹೆಣ್ಣು ಮಗಳನ್ನು ಕಳುಹಿಸಿಕೊಡುವಾಗ, ತಾಯಿಯನ್ನು ಸಂತೈಸುವಂತೆ ಬಿಂಬಿತವಾಗುವ ಈ ಸಾಲುಗಳು ಇಂದಿಗೂ ಚಾಲ್ತಿಯಲ್ಲಿದೆ. ಶಿವಪಾರ್ವತಿ ಕಲ್ಯಾಣ, ಗಿರಿಜಾ ಕಲ್ಯಾಣ, ಗಂಗೆಗೌರಿ ಕಲ್ಯಾಣ ಮುಂತಾದ ಹೆಸರಿನಿಂದ ಕರೆಯುವ ಸೋಬಾನೆ ದೇಸಿ ಸಮುದಾಯದ ಅಜ್ಞಾತ ಕಲೆ ಎಂದೇ ಪ್ರಸಿದ್ಧವಾಗಿದೆ. ಸೋ ಎನ್ನಿರೆ.... ಸೋಬಾನೆ ಬನ್ನೀರೆ... ಹೆಣ್ಣು ನಿಮಗಾಯ್ತು ಗಂಡು ನಮಗಾಯ್ತು ಸಣ್ಣಕ್ಕಿ ಬ್ವೊನ ಸಾಬ್ರುಗಾಯ್ತು ಎನ್ನುವ ಹಾಡು ಈಗಲೂ ಪ್ರಚಲಿತದಲ್ಲಿದೆ.

ಮದುವೆಯ ಹಾಡುಗಳು :–

ಮದುವೆ ಸಂದರ್ಭದಲ್ಲಿನ ಎಣ್ಣೆ ಒತ್ತುವ ಹಾಡು, ಸೋಬಾನೆ ಪದ, ಬೀಗಿತ್ತಿ ಹಾಸ್ಯದ ಪದಗಳು, ಆರತಿ ಪದಗಳು ಇನ್ನು ಮುಂತಾದವುಗಳು ಬಳಕೆಯಲ್ಲಿವೆ.

ಲಾವಣಿ ಪದ :–

ಲಾವಣಿ ಪದವು ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿ ಕಂಡುಬರುತ್ತದೆ. ಉತ್ತರ ಕರ್ನಾಟಕದ ಭಾಗಗಳಾದ ಬೆಳಗಾವಿ, ಬಿಜಾಪುರ, ಕಲಬುರ್ಗಿ, ಬೀದರ್, ರಾಯಚೂರು, ಬಳ್ಳಾರಿ, ಧಾರವಾಡ ಜಿಲ್ಲೆಗಳಲ್ಲಿ ಪ್ರಾದೇಶಿಕ ವ್ಯತ್ಯಾಸಗಳೊಂದಿಗೆ ಈ ಲಾವಣಿ ಪದವು ಅಸ್ತಿತ್ವದಲ್ಲಿದೆ. ದಕ್ಷಿಣ ಕರ್ನಾಟಕದ ಕೆಲವು ಭಾಗದಲ್ಲೂ ಕೂಡ ಲಾವಣಿ ಎಂಬ ಒಂದು ಪ್ರಕಾರವಿದ್ದರೂ ಉತ್ತರದಷ್ಟು ವೈವಿಧ್ಯ ಅದಕ್ಕಿಲ್ಲ. ಲಾವಣಿ ಹಾಡುಗಳು ಬಹಳ ವಿಸ್ತಾರವಾದವುಗಳಲ್ಲಿ ಮಹಾಕಾವ್ಯದ ವ್ಯಾಪ್ತಿ ಇದಕ್ಕೆ ಹೊರತಾದುದು. ನಾಡ ವಿಡಂಬನೆ, ಹಾಸ್ಯಮಯ ಪ್ರಸಂಗಗಳು ಲಾವಣಿಯಲ್ಲಿ ಎದ್ದು ಕಾಣುವ ಅಂಶಗಳು. ಮುಖ್ಯವಾಗಿ

ಶೃಂಗಾರ ಮತ್ತು ವೀರತೆಗೆ ಅದು ಸವಾಲ್ ಜವಾಬ್ ವಿಚಾರದಲ್ಲಿ ಅದರ ಕಾಲವನ್ನು ಒಂದು ಗಂಟೆಗೆ ಸೀಮಿತಗೊಳಿಸಲು ಸಾಧ್ಯವಿಲ್ಲ. ಅದು ಸಂದರ್ಭಾನುಸಾರವಾಗಿ ಬೆಳೆಯುತ್ತದೆ. ಲಾವಣಿ ಸಾಹಿತ್ಯ ಪರಂಪರೆಯಲ್ಲಿ ಬೀಬೀ ಇಂಗಳಗಿ ಭಾಗದ ಲಾವಣಿಕಾರರು, ಹಲಕುಂದ ಭಾಗದ ಲಾವಣಿಕಾರರು ಎಂಬ ಪ್ರಾದೇಶಿಕ ವಿವರಗಳನ್ನು ಗಮನಿಸುವುದು ಸೂಕ್ತವೆನಿಸುತ್ತದೆ.

ಬಂಡಿಯ ಪದ :–

ಗಾಡಿಯನ್ನು ಹೊಡೆಯುತ್ತ ಎತ್ತಿಗೆ ಕಟ್ಟಿದ ಗೆಜ್ಜೆಗಳ ಹಾಗೂ ಬಂಡಿಯ ಚಕ್ರದ ದನಿಯನ್ನು ಮೀರಿ ಎತ್ತರದ ದನಿಯಲ್ಲಿ ಹಾಡಿ ಕೇಕೆ ಹಾಕಿದಾಗ ಮುಗಿಲು ಮುಟ್ಟುವುದು ಖಚಿತ. ಬಂಡಿಯ ಪದ ಹಾಡಲು, ಕಪಿಲೆ ನೀರೆತ್ತುವಾಗ ಹಾಡಲು ತಾಕತ್ತು ಬೇಕಾಗುತ್ತದೆ. ಬ್ರಹ್ಮಾಂಡಕ್ಕೆ ದನಿ ಮುಟ್ಟುವಂತೆ ಹಾಡಿ ಕೇಕೆ ಹಾಕುವುದು ಬಂಡಿ ಪದ ಹಾಡುವವರ ಗತ್ತಾಗಿರುತ್ತದೆ. ಗಾಡಿಯು ದಾರಿ ಸಾಗಲಿ, ನಮ್ಮ ಊರನ್ನು ಬೇಗ ಸೇರಲಿ ಹೂಡೋದು ಹೊಸ ಬಂಡಿ ಹೊಡೆಯೋನು ಹಸು ಮಗ ಆಲಿಸಿ ಕೇಳೋ ಬಸವಣ್ಣ ಹೀಗೆ ಬಂಡಿಯ ಪದಗಳು ಇರುತ್ತವೆ.

ಕಿನ್ನರಿ ಪದ :–

ಕಿನ್ನರಿ ವಾದ್ಯ ಹಿಡಿದು, ಮಧ್ಯಮ ಶ್ರುತಿಯಲ್ಲಿ ತಂತಿ ಮೀಟುತ್ತ ದನಿಗೂಡಿಸಿ ಬಹಳ ಇಂಪಾಗಿ ಹಾಡುವ ಪದಗಳು. ಚೆಲುವಯ್ಯ ಚೆಲುವೋ – ತಾನಿ ತಂದನ್ನಾ। ಚಿನ್ಮಾಯಾ ರೂಪೇ ಕೋಲಣ್ಣ ಕೋಲೇ ಬೆಟ್ಟದ ಮ್ಯಾಗಳ ಜಲ್ಲೇ ಬಿದಿರು – ಬೇಲಿ ಮ್ಯಾಗಳ್ ಸೋರೆ ಬುರುಡೆ ಲೋಲು ಕಿನ್ನರಿ ನುಡಿಸೋನ್ ಯಾರಯ್ಯ – ಎಂದು ಹಾಡು ಹಾಡಲಾಗುತ್ತದೆ.

ಗೀಗೀ ಪದ :–

ಏಕನಾದದ ಶ್ರುತಿಹರ ಕಥನ ಕವನವನ್ನೋ, ಸಂತರ ವೀರರ ಕಥೆಯ ಹಾಡನ್ನೋ ಇಬ್ಬರು ಕೂಡಿ ಹಾಡುವರು. ಪ್ರತಿ ಚರಣ ಮುಗಿದೊಡನೆ ಗೀ ಗೀ ಗೀ ಗೀ ಎಂದು ತಾಳಕ್ಕೆ ಸರಿಯಾಗಿ ಶ್ರುತಿಗೂಡಿಸುವರು. ತೆಲುಗಿನಲ್ಲಿ ತಂದನಾನು ತಂದಾನು ತಾನಾ ಎನ್ನುವರು. ಇಡೀ ರಾತ್ರಿ ಮಲೆನಾಡಿನ ಅಡಿಕೆ ತೋಟದ ಪ್ರದೇಶಗಳಲ್ಲಿ ಹಾಡುತ್ತಾರೆ.

ಜನಪದ ಸಂಗೀತ :–

ಜನಪದರ ನಾಲಿಗೆಯ ಮೇಲೆ ಹುಟ್ಟಿ ಬಂದಿರುವ ಜನಪದ ಸಂಗೀತ ಒಂದು ವಿಶೇಷವಾದದ್ದು. ಇದರಲ್ಲಿ ಸಾಕಷ್ಟು ವೈವಿಧ್ಯವಿದ್ದು ಕೇಳಲು ಇಂಪಾಗಿದ್ದರೂ ಇದರ ರೂಪ, ನಡೆ ಎಲ್ಲಾ ತುಂಬಾ ಸರಳವೇ ಆಗಿದೆ. ಶಾಸ್ತ್ರೀಯ ಸಂಗಿತಕ್ಕೆ ಅಂತರರಾಷ್ಟ್ರೀಯವೆನ್ನಬಹುದಾದ ಒಂದು ಪದ್ಧತಿ ಇರುತ್ತದೆ. ಇದರಲ್ಲಾದರೋ ಪ್ರಾದೇಶಿಕವೆನ್ನಬಹುದಾದ ಹಲವು ಪದ್ಧತಿಗಳಿರುತ್ತವೆ. ಜನಪದ ಸಂಗೀತವನ್ನು ಮೂರು ಭಾಗಗಳಾಗಿ ನೋಡಬಹುದು. * ವಾದ್ಯ ಸಂಗೀತ, * ಹಾಡುಗಾರಿಕೆ, * ಸಾಹಿತ್ಯ,

ಜನಪದದಲ್ಲಿ ಮೊದಲು ಹುಟ್ಟಿದ್ದು ಸಂಗೀತ ಹಾಗೂ ನೃತ್ಯ. ಇವೆರಡಕ್ಕೂ ಬಹು ಹತ್ತಿರದ ಬಾಂಧವ್ಯ ಉಂಟು. ಅನಂತರ ಹುಟ್ಟಿದ್ದು ಸಾಹಿತ್ಯ. ಕುಣಿತ ಜನತೆಯ ಜೀವನದ ಮುಖ್ಯ ಅಂಗ. ಸಂತೋಷ ಉಕ್ಕಿದಾಗ, ಮಳೆ ಬೆಳೆ ಚೆನ್ನಾಗಿ ಆದಾಗ, ಮದುವೆ ಮೊದಲಾದ ಶುಭ ಉಂಟಾದಾಗ ಕುಣಿಯುವುದು ವಾಡಿಕೆಯಾಗಿದೆ. ಧಾರ್ಮಿಕ ಆಚರಣೆಗಳು, ಗ್ರಾಮ ದೇವತೆಯ ಹಬ್ಬಗಳು ಮುಂತಾದ ಸಂದರ್ಭಗಳಲ್ಲಿ ಸಂಗೀತಕ್ಕೆ ತಕ್ಕ ನೃತ್ಯಗಳೂ ಇರುತ್ತಿದ್ದವು.ಜಾನಪದ ಗಾಯಕರನ್ನು ಸಾಮಾನ್ಯ ಗಾಯಕರು, ವೃತ್ತಿ ಗಾಯಕರು ಮತ್ತು ಅರೆವೃತ್ತಿ ಗಾಯಕರು, ಹವ್ಯಾಸಿ ಗಾಯಕರು ಎಂದು ವಿಭಾಗಿಸುತ್ತೇವೆ. ಇದರಲ್ಲಿ ಪುರುಷ, ಮಹಿಳಾ ಮತ್ತು ಮಕ್ಕಳ ಗಾಯಕರನ್ನು ಗುರುತಿಸುತ್ತೇವೆ.

ಪರಾಮರ್ಶನ ಗ್ರಂಥಗಳು

೧. ಡಾ.ಹಾ.ಮಾ.ನಾಯಕ–ಜಾನಪದ ಸ್ವರೂಪ–ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು.೨೦೧೫.

೨. ಡಾ.ಚಕ್ಕೆರೆ ಶಿವಶಂಕರ್–ಜಾನಪದ ಪ್ರವೇಶ –ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು -೨೦೧೨.

೩. ಪ್ರೊ. ಹಿ.ಶಿ. ರಾಮಚಂದ್ರೇಗೌಡ – ಜಾನಪದ : ಸಾಂಸ್ಕೃತಿಕ ಆಯಾಮಗಳು – ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೧೯೯೮.

೪. ವ.ನಂ. ಶಿವರಾಮು – ಕನ್ನಡ ಜಾನಪದ ಹನ್ನೊಂದು ಮುಖಗಳು – ಸಿವಿಜಿ ಇಂಡಿಯಾ, ಬೆಂಗಳೂರು – ೨೦೧೪.

೫. ಕುವರಯಲ್ಲಪ್ಪ–ಪ್ರಖ್ಯಾತ ಜನಪದ ಗೀತೆಗಳು–ಪೂಜಾ ಪುಸ್ತಕಭಂಡಾರ,ಬೆಂಗಳೂರು– ೨೦೦೫.

೬. ಡಾ. ಚಕ್ಕೆರೆ ಶಿವಶಂಕರ್ – ಕರ್ನಾಟಕ ಜಾನಪದ ಪರಿಷತ್ತು ನಡೆದು ಬಂದ ಹಾದಿ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು – ೨೦೧೦.

೭. ಡಾ. ಚಕ್ಕೆರೆ ಶಿವಶಂಕರ್ – ಕರಾವಳಿ ಕರ್ನಾಟಕ ಜನಪದ ಕಲೆಗಳು – ಚಂದನ ಪ್ರಿಂಟರ್ಸ್ ಬೆಂಗಳೂರು – ೨೦೦೮.

೮. ಡಾ.ಚಕ್ಕೆರೆ ಶಿವಶಂಕರ್–ಜನಪದ ವೃತ್ತಿ ಗಾಯಕರು–ಚಂದನ ಪ್ರಿಂಟರ್ಸ್ಬೆಂಗಳೂರು – ೨೦೦೮.

೯.ಡಾ.ಹಿ,ಶಿ.ರಾಮಚಂದ್ರೇಗೌಡ –ಜನಪದರು ನಾವು ಪ್ರಬೋಧ ಮುದ್ರಣಾಲಯ,ಮೈಸೂರು.೧೯೪೭.

೧೦.ಸಿ.ಎಸ್.ಶಿವಕುಮಾರಸ್ವಾಮಿ–ಕರ್ನಾಟಕ ಜಾತ್ರೆಗಳು–ಮೈಸೂರು ವಿ. ವಿ.ಮುದ್ರಣಾಲಯ.೧೯೮೮.

೧೧. ಹನುಮಂತ ರಾವ್ ಬಿ.ದೊಡ್ಡಮನಿ–ಜಾನಪದ ಹಬ್ಬಗಳು ಮತ್ತು ಉತ್ಸವಗಳು–ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೨೦೦೪.

೧೨.ಡಾ.ಹಿ.ಚಿ.ಬೋರಲಿಂಗಯ್ಯ–ಕರ್ನಾಟಕ ಜನಪದ ಕಲೆಗಳಕೋಶ–ಹಂಪಿ ವಿಶ್ವವಿದ್ಯಾಲಯ,ಹಂಪಿ.

೧೩. ಸಂದರ್ಶನ– ಡಾ. ಎಂ.ಜಿ. ಮಂಜುನಾಥ್, ಕನ್ನಡ ಪ್ರಾಧ್ಯಾಪಕರು ಹಾಗೂ ಕುಲ ಸಚಿವರು, ಕೆಎಸ್‌ಜಿಹೆಚ್, ಎಂಪಿಎಯು– ಮೈಸೂರು.